**Re.No. D. 221**

# भारत का राजपत्र
# The Gazette of India
# ಭಾರತ ರಾಜಪತ್ರ

**(Extraordinary)**
(ವಿಶೇಷ ಸಂಚಿಕೆ)

**भाग IX अनुभाग 1**
**PART IX SECTION 1**
ಭಾಗ **IX** ವಿಭಾಗ **1**

प्राधिकार से प्रकाशित
**Published by Authority**
ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ

| | | | |
|---|---|---|---|
| सं 1<br>No.1<br>ಸಂಖ್ಯೆ 1 | नई दिल्ली, सोमवार, मार्च 29, 1993<br>New Delhi, Monday, March 29, 1993<br>ನವದೆಹಲಿ, ಸೋಮವಾರ, ಮಾರ್ಚ್ 29, 1993 | चैत्र 09, 1915 (शक)<br>Chaitra 06, 1915 (saka)<br>ಚೈತ್ರ 09, 1915 (ಶಕ) | खंड.14<br>Vol. 14<br>ಸಂಪುಟ. 14 |


**Ministry of Law, Justice & Company Affairs**
(Legislative Department)
New Delhi, 29th March, 1993

**ಕಾನೂನು, ನ್ಯಾಯ ಮತ್ತು ಕಂಪನಿ ವ್ಯವಹಾರಗಳ ಮಂತ್ರಾಲಯ**
**(ವಿಧಾಯೀ ಇಲಾಖೆ)**
**ನವದೆಹಲಿ, 29ನೇ ಮಾರ್ಚ್, 1993**

The Translation in Kannada of the following Acts, namely:- (1) The Payment of Wages Act, 1936 (2) The Contempt of Courts Act, 1971 (3) The Special Marriage Act, 1954 (4) The Cattle Trespass Act, 1871 (5) The Minimum Wages Act, 1948 (6) The International Airports Authority Act, 1971 (7) The Scheduled Castes and the Scheduled Tribes (Prevention of Atrocities) Act, 1989 (8) The Registration Act, 1908 (9) The Police Act, 1861 (10) The Legal Services Authorities Act, 1987 (11) The Environment (Protection) Act, 1986 (12) The Ancient Monuments and Archaeological Sites and Remains Act, 1958 (13) The Explosives Act, 1884 (14) The Equal Remuneration Act, 1976 (15) The Probation of Offenders Act, 1958 (16) The Central Reserve Police Force Act, 1949 (17) The Conservation of foreign Exchange And Prevention of Smuggling Activities Act, 1974-are hereby published under the authority of the President and shall be deemed to be authoritative text thereof in Kannada under clause (a) of section 2 of the Authoritative Texts (Central Laws) Act, 1973 (50 of 1973).

ಈ ಕೆಳಕಂಡ ಅಧಿನಿಯಮಗಳು ಎಂದರೆ:– (1) ಮಜೂರಿ ಸಂದಾಯ ಅಧಿನಿಯಮ, 1936 (2) ನ್ಯಾಯಾಲಯ ನಿಂದನೆ ಅಧಿನಿಯಮ, 1971 (3) ವಿಶೇಷ ವಿವಾಹ ಅಧಿನಿಯಮ, 1954 (4) ಜಾನುವಾರು ಅತಿಕ್ರಮ ಪ್ರವೇಶ ಅಧಿನಿಯಮ, 1871 (5) ಕನಿಷ್ಠ ಮಜೂರಿ ಅಧಿನಿಯಮ, 1948 (6) ಅಂತರರಾಷ್ಟ್ರೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರ ಅಧಿನಿಯಮ, 1971 (7) ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಬುಡಕಟ್ಟುಗಳ (ದೌರ್ಜನ್ಯ ಪ್ರತಿಬಂಧ) ಅಧಿನಿಯಮ, 1989 (8) ನೋಂದಣಿ ಅಧಿನಿಯಮ, 1908 (9) ಪೊಲೀಸು ಅಧಿನಿಯಮ, 1861 (10) ಕಾನೂನು ಸೇವಾ ಪ್ರಾಧಿಕಾರ ಅಧಿನಿಯಮ, 1987 (11) ಪರಿಸರ (ಸಂರಕ್ಷಣೆ) ಅಧಿನಿಯಮ, 1986 (12) ಪ್ರಾಚೀನ ಸ್ಮಾರಕ ಮತ್ತು ಪುರಾತತ್ವ ಸ್ಥಳ ಮತ್ತು ಅವಶೇಷ ಅಧಿನಿಯಮ, 1958 (13) ಸ್ಫೋಟಕ ಅಧಿನಿಯಮ, 1884 (14) ಸಮಾನ ಪರಿಶ್ರಮ ಧನ ಅಧಿನಿಯಮ, 1976 (15) ಅಪರಾಧಿಗಳ ಪರಿವೀಕ್ಷಣಾ ಅಧಿನಿಯಮ, 1958 (16) ಕೇಂದ್ರ ರಿಸರ್ವ್ ಪೊಲೀಸು ದಳ ಅಧಿನಿಯಮ, 1949 (17) ವಿದೇಶೀ ವಿನಿಮಯ ಸಂರಕ್ಷಣೆ ಮತ್ತು ಕಳ್ಳಸಾಗಣೆ ಚಟುವಟಿಕೆ ಪ್ರತಿಬಂಧ ಅಧಿನಿಯಮ, 1974– ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973 (1973 ರ 50) ರ 2ನೇ ಪ್ರಕರಣದ (ಎ) ಖಂಡದ ಮೇರೆಗೆ ಇದನ್ನು ಈ ಅಧಿನಿಯಮದ ಅಧಿಕೃತ ಕನ್ನಡ ಪಾಠವೆಂದು ಭಾವಿಸತಕ್ಕದ್ದು.

# ಕನಿಷ್ಠ ಮಜೂರಿ ಅಧಿನಿಯಮ, 1948

## (1948ರ ಸಂಖ್ಯೆ 11)

[15ನೇ ಮಾರ್ಚ್, 1948.]

ಕೆಲವು ನಿಯೋಜನೆಗಳಲ್ಲಿ ಕನಿಷ್ಠ ಮಜೂರಿಗಳ ದರಗಳನ್ನು ನಿಗದಿಪಡಿಸುವುದಕ್ಕಾಗಿ ಉಪಬಂಧಿಸುವ ಅಧಿನಿಯಮ.

ಕೆಲವು ನಿಯೋಜನೆಗಳಲ್ಲಿ ಕನಿಷ್ಠ ಮಜೂರಿಗಳ ದರಗಳನ್ನು ನಿಗದಿಪಡಿಸುವುದಕ್ಕಾಗಿ ಉಪಬಂಧಿಸುವುದು ವಿಹಿತವಾಗಿರುವುದರಿಂದ;

ಈ ಕೆಳಕಂಡಂತೆ ಈ ಮೂಲಕ ಅಧಿನಿಯಮಿಸಲಾಗಿದೆ:-

1. **ಚಿಕ್ಕ ಹೆಸರು ಮತ್ತು ವ್ಯಾಪ್ತಿ.**- (1) ಈ ಅಧಿನಿಯಮವನ್ನು ಕನಿಷ್ಠ ಮಜೂರಿ ಅಧಿನಿಯಮ, 1948 ಎಂದು ಕರೆಯತಕ್ಕದ್ದು.

(2) ಇದು ಇಡೀ ಭಾರತಕ್ಕೆ ಅನ್ವಯವಾಗುತ್ತದೆ.

2. **ಅರ್ಥ ವಿವರಣೆ.**- ಈ ಅಧಿನಿಯಮದಲ್ಲಿ, ವಿಷಯ ಅಥವಾ ಸಂದರ್ಭಕ್ಕೆ ವಿರುದ್ಧವಾಗಿ ಏನಾದರೂ ಇದ್ದ ಹೊರತು,-

(ಎ) "ಯುವಕ" ಎಂದರೆ, ತನ್ನ ಹದಿನಾಲ್ಕನೆಯ ವರ್ಷ ವಯಸ್ಸನ್ನು ಪೂರ್ಣಗೊಳಿಸಿರುವ ಆದರೆ ತನ್ನ ಹದಿನೆಂಟನೆಯ ವರ್ಷವನ್ನು ಪೂರ್ಣಗೊಳಿಸದಿರುವ ವ್ಯಕ್ತಿ;

(ಎಎ) "ವಯಸ್ಕ" ಎಂದರೆ, ತನ್ನ ಹದಿನೆಂಟನೆಯ ವರ್ಷ ವಯಸ್ಸನ್ನು ಪೂರ್ಣಗೊಳಿಸಿರುವ ಒಬ್ಬ ವ್ಯಕ್ತಿ;

(ಬಿ) "ಸಮುಚಿತ ಸರ್ಕಾರ" ಎಂದರೆ:-

(i) ಕೇಂದ್ರ ಸರ್ಕಾರ ಅಥವಾ ರೈಲ್ವೆ ಆಡಳಿತದ ಅಧಿಕಾರದ ಮೂಲಕ ಅಥವಾ ಮೇರೆಗೆ ನಡೆಸಲಾಗುತ್ತಿರುವ ಯಾವುದೇ ಅನುಸೂಚಿತ ನಿಯೋಜನೆಗೆ ಸಂಬಂಧಪಟ್ಟಂತೆ ಅಥವಾ ಕೇಂದ್ರ ಅಧಿನಿಯಮದ ಮೂಲಕ ಸ್ಥಾಪಿಸಲಾದ ಗಣಿ, ತೈಲಕ್ಷೇತ್ರ ಅಥವಾ ಮುಖ್ಯ ಬಂದರು ಅಥವಾ ಯಾವುದೇ ನಿಗಮಕ್ಕೆ ಸಂಬಂಧಪಟ್ಟಂತೆ ಕೇಂದ್ರ ಸರ್ಕಾರ; ಮತ್ತು

(ii) ಯಾವುದೇ ಇತರ ಅನುಸೂಚಿತ ನಿಯೋಜನೆಗೆ ಸಂಬಂಧಪಟ್ಟಂತೆ ರಾಜ್ಯ ಸರ್ಕಾರ;

(ಬಿಬಿ) "ಮಗು" ಎಂದರೆ, ಅವನ ಹದಿನಾಲ್ಕನೆಯ ವರ್ಷ ವಯಸ್ಸನ್ನು ಪೂರ್ಣಗೊಳಿಸದಿರುವ ಒಬ್ಬ ವ್ಯಕ್ತಿ;

(ಸಿ) "ಸಕ್ಷಮ ಪ್ರಾಧಿಕಾರ" ಎಂದರೆ, ಸಮುಚಿತ ಸರ್ಕಾರವು ಅದರ ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಅಂಥ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ಅನುಸೂಚಿತ ನಿಯೋಜನೆಗಳಲ್ಲಿ ನಿಯೋಜಿತರಾದ ನಿಯೋಜಿತರಿಗೆ ಅನ್ವಯವಾಗುವ ಜೀವನ ವೆಚ್ಚದ ಸೂಚ್ಯಂಕವನ್ನು ಕಾಲಕಾಲಕ್ಕೆ ಖಚಿತಪಡಿಸಿಕೊಳ್ಳಲು ನೇಮಕಗೊಂಡ ಪ್ರಾಧಿಕಾರ;

(ಡಿ) ಕನಿಷ್ಠ ಮಜೂರಿಗಳ ದರಗಳನ್ನು ನಿಗದಿಪಡಿಸಲಾಗಿರುವಂಥ ಯಾವುದೇ ಅನುಸೂಚಿತ ನಿಯೋಜನೆಯಲ್ಲಿನ ನಿಯೋಜಿತರಿಗೆ ಸಂಬಂಧಪಟ್ಟಂತೆ "ಜೀವನ ವೆಚ್ಚದ ಸೂಚ್ಯಂಕ" ಎಂದರೆ, ಅಂಥ

ನಿಯೋಜನೆಯಲ್ಲಿನ ನಿಯೋಜಿತರಿಗೆ ಅನ್ವಯವಾಗುವ ಜೀವನ ವೆಚ್ಚದ ಸೂಚ್ಯಂಕವೆಂಬುದಾಗಿ ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಸಕ್ಷಮ ಪ್ರಾಧಿಕಾರವು ಖಚಿತಪಡಿಸಿಕೊಂಡು ಘೋಷಿಸಿದ ಸೂಚ್ಯಂಕ;

(ಇ) "ನಿಯೋಜಕ" ಎಂದರೆ, ಈ ಅಧಿನಿಯಮದ ಮೇರೆಗೆ ಕನಿಷ್ಠ ಮಜೂರಿಗಳ ದರಗಳನ್ನು ನಿಗದಿಪಡಿಸಲಾಗಿರುವಂಥ ಯಾವುದೇ ಅನುಸೂಚಿತ ನಿಯೋಜನೆಗೆ ಸಂಬಂಧಿಸಿದಂತೆ ಅದರಲ್ಲಿ ಒಬ್ಬ ಅಥವಾ ಹೆಚ್ಚು ನಿಯೋಜಿತರನ್ನು ನೇರವಾಗಿಯಾಗಲಿ ಅಥವಾ ಇನ್ನೊಬ್ಬ ವ್ಯಕ್ತಿಯ ಮೂಲಕವಾಗಿಯಾಗಲಿ ಅಥವಾ ಅವನ ಪರವಾಗಿ ಆಗಲಿ ಅಥವಾ ಯಾರೇ ಇತರ ವ್ಯಕ್ತಿಯ ಪರವಾಗಿ ಆಗಲಿ ನಿಯೋಜಿಸಿಕೊಳ್ಳುವ ಯಾರೇ ವ್ಯಕ್ತಿ ಮತ್ತು ಅದು ಪ್ರಕರಣ 26ರ ಉಪಪ್ರಕರಣ (3)ರಲ್ಲಿ ಇರುವುದನ್ನು ಹೊರತುಪಡಿಸಿ,–

(i) ಈ ಅಧಿನಿಯಮದ ಮೇರೆಗೆ ಕನಿಷ್ಠ ಮಜೂರಿಗಳ ದರಗಳನ್ನು ನಿಗದಿಪಡಿಸಲಾಗಿರುವಂಥ ಯಾವುದೇ ಅನುಸೂಚಿತ ನಿಯೋಜನೆಯನ್ನು ನಡೆಸಲಾಗುತ್ತಿರುವ ಕಾರ್ಖಾನೆಯಲ್ಲಿ ಕಾರ್ಖಾನೆಗಳ ಅಧಿನಿಯಮ, 1948 (1948ರ 63)ರ ಪ್ರಕರಣ 7ರ ಉಪಪ್ರಕರಣ (1)ರ ಖಂಡ (ಎಫ್)ನ ಮೇರೆಗೆ ಕಾರ್ಖಾನೆಯ ವ್ಯವಸ್ಥಾಪಕನೆಂದು ಹೆಸರಿಸಲಾದ ಯಾರೇ ವ್ಯಕ್ತಿ;

(ii) ಈ ಅಧಿನಿಯಮದ ಮೇರೆಗೆ ಕನಿಷ್ಠ ಮಜೂರಿಗಳ ದರಗಳನ್ನು ನಿಗದಿಪಡಿಸಲಾಗಿರುವ ಭಾರತದಲ್ಲಿನ ಯಾವುದೇ ಸರ್ಕಾರದ ನಿಯಂತ್ರಣದಲ್ಲಿರುವ ಯಾವುದೇ ಅನುಸೂಚಿತ ನಿಯೋಜನೆಯಲ್ಲಿ ನಿಯೋಜಿತರ ಮೇಲ್ವಿಚಾರಣೆ ಮತ್ತು ನಿಯಂತ್ರಣಕ್ಕಾಗಿ ಅಂಥ ಸರ್ಕಾರವು ನೇಮಕ ಮಾಡಿದ ವ್ಯಕ್ತಿ ಅಥವಾ ಪ್ರಾಧಿಕಾರ ಅಥವಾ ಹಾಗೆ ಯಾರೇ ವ್ಯಕ್ತಿ ಅಥವಾ ಪ್ರಾಧಿಕಾರವನ್ನು ನೇಮಕ ಮಾಡದೇ ಇರುವಲ್ಲಿ, ಇಲಾಖೆಯ ಮುಖ್ಯಸ್ಥ;

(iii) ಈ ಅಧಿನಿಯಮದ ಮೇರೆಗೆ ಕನಿಷ್ಠ ಮಜೂರಿಗಳ ದರಗಳನ್ನು ನಿಗದಿಪಡಿಸಲಾಗಿರುವಂಥ ಯಾವುದೇ ಸ್ಥಳೀಯ ಪ್ರಾಧಿಕಾರದ ಅಧೀನದಲ್ಲಿರುವ ಯಾವುದೇ ಅನುಸೂಚಿತ ನಿಯೋಜನೆಯಲ್ಲಿ ಅಂಥ ಪ್ರಾಧಿಕಾರವು ನಿಯೋಜಿತರ ಮೇಲ್ವಿಚಾರಣೆ ಮತ್ತು ನಿಯಂತ್ರಣಕ್ಕಾಗಿ ನೇಮಕ ಮಾಡಿದ ವ್ಯಕ್ತಿ ಅಥವಾ ಯಾರೇ ವ್ಯಕ್ತಿಯನ್ನು ಹಾಗೆ ನೇಮಕ ಮಾಡದೇ ಇರುವಲ್ಲಿ ಆ ಸ್ಥಳೀಯ ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ;

(iv) ಈ ಅಧಿನಿಯಮದ ಮೇರೆಗೆ ಕನಿಷ್ಠ ಮಜೂರಿಗಳ ದರಗಳನ್ನು ನಿಗದಿಪಡಿಸಲಾದಂಥ ಯಾವುದೇ ಅನುಸೂಚಿತ ನಿಯೋಜನೆಯನ್ನು ನಡೆಸಲಾಗುತ್ತಿರುವ ಯಾವುದೇ ಇತರ ಸಂದರ್ಭದಲ್ಲಿ ಒಡೆಯನಿಗೆ ನಿಯೋಜಿತರ ಮೇಲ್ವಿಚಾರಣೆ ಮತ್ತು ನಿಯಂತ್ರಣಕ್ಕಾಗಿ ಅಥವಾ ಮಜೂರಿಗಳ ಸಂದಾಯಕ್ಕಾಗಿ ಜವಾಬ್ದಾರನಾದ ಯಾರೇ ವ್ಯಕ್ತಿ

– ಇವರನ್ನು ಒಳಗೊಳ್ಳುತ್ತದೆ;

(ಎಫ್) "ನಿಯಮಿಸಲಾದುದು ಎಂದರೆ, ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು;

(ಜಿ) "ಅನುಸೂಚಿತ ನಿಯೋಜನೆ" ಎಂದರೆ, ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ನಿಯೋಜನೆ ಅಥವಾ ಅಂಥ ನಿಯೋಜನೆಯ ಭಾಗವಾಗಿರುವ ಕೆಲಸದ ಯಾವುದೇ ಕಾರ್ಯ ವಿಧಾನ ಅಥವಾ ಶಾಖೆ;

(ಹೆಚ್) "ಮಜೂರಿಗಳು" ಎಂದರೆ, ನಿಯೋಜನೆಯ ಕರಾರಿನ ನಿಬಂಧನೆಗಳು ಅವು ವ್ಯಕ್ತವಾಗಿರಲಿ ಅಥವಾ ಇಂಗಿತವಾಗಿರಲಿ, ಅವುಗಳನ್ನು ಪೂರೈಸಿದರೆ ವ್ಯಕ್ತಿಯ ನಿಯೋಜನೆಗೆ ಅಥವಾ ಅಂಥ ನಿಯೋಜನೆಯಲ್ಲಿ ಮಾಡಿದ ಕೆಲಸಕ್ಕೆ ಸಂಬಂಧಿಸಿದಂತೆ ನಿಯೋಜಿತನಾದ ವ್ಯಕ್ತಿಗೆ ಸಂದಾಯ ಮಾಡಬೇಕಾದಂಥ ಹಣದ ರೂಪದಲ್ಲಿಯ ಎಲ್ಲ ಪರಿಶ್ರಮಧನ ಮತ್ತು ಇದು ಮನೆ ಬಾಡಿಗೆ ಭತ್ಯೆಯನ್ನು ಒಳಗೊಳ್ಳುತ್ತದೆ, ಆದರೆ,–

(i) (ಎ) ಯಾವುದೇ ಮನೆಯ ಸ್ಥಳಾವಕಾಶ, ದೀಪ, ನೀರು ಪೂರೈಕೆ, ವೈದ್ಯೋಪಚಾರ ಮೌಲ್ಯವನ್ನು; ಅಥವಾ

(ಬಿ) ಸಮುಚಿತ ಸರ್ಕಾರದ ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಹೊರತುಪಡಿಸಿದ ಯಾವುದೇ ಇತರ ಸೌಕರ್ಯ ಅಥವಾ ಯಾವುದೇ ಸೇವೆಯ ಮೌಲ್ಯವನ್ನು;

(ii) ಯಾವುದೇ ಪಿಂಚಣಿ ನಿಧಿ ಅಥವಾ ಭವಿಷ್ಯ ನಿಧಿಗೆ ಅಥವಾ ಸಾಮಾಜಿಕ ವಿಮೆಯ ಯಾವುದೇ ಪರಿಯೋಜನೆಯ ಮೇರೆಗೆ ನಿಯೋಜಕನು ಸಂದಾಯ ಮಾಡಿದ ಯಾವುದೇ ವಂತಿಗೆ;

(iii) ಯಾವುದೇ ಪ್ರಯಾಣಭತ್ಯೆ ಅಥವಾ ಯಾವುದೇ ಪ್ರಯಾಣ ರಿಯಾಯಿತಿಯ ಮೌಲ್ಯ;

(iv) ಅವನ ನಿಯೋಜನೆಯ ಸ್ವರೂಪದಿಂದಾಗಿ ಅವನಿಗೆ ತಗುಲಿದ ವಿಶೇಷ ವೆಚ್ಚಗಳನ್ನು ಭರಿಸಲು ನಿಯೋಜಿತ ವ್ಯಕ್ತಿಗೆ ಸಂದಾಯ ಮಾಡಿದ ಯಾವುದೇ ಮೊತ್ತ; ಅಥವಾ

(v) ಸೇವೆಯಿಂದ ಬಿಡುಗಡೆಯಾದ ಮೇಲೆ ಸಂದಾಯ ಮಾಡಬೇಕಾದ ಯಾವುದೇ ಉಪದಾನ

– ಇವುಗಳನ್ನು ಒಳಗೊಳ್ಳುವುದಿಲ್ಲ;

(ಐ) "ನಿಯೋಜಿತ" ಎಂದರೆ, ಕನಿಷ್ಠ ಮಜೂರಿಗಳ ದರಗಳನ್ನು ನಿಗದಿಪಡಿಸಲಾಗಿರುವಂಥ ಅನುಸೂಚಿತ ನಿಯೋಜನೆಯಲ್ಲಿ ಕುಶಲ ಅಥವಾ ಅಕುಶಲ, ದೈಹಿಕ ಅಥವಾ ಲಿಪಿಕ ಸಂಬಂಧವಾದ ಯಾವುದೇ ಕೆಲಸವನ್ನು ಬಾಡಿಗೆಗಾಗಿ ಅಥವಾ ಪ್ರತಿಫಲಕ್ಕಾಗಿ ಮಾಡಲು ನಿಯೋಜಿತನಾದ ಯಾರೇ ವ್ಯಕ್ತಿ ಮತ್ತು ಹೊರ ಕೆಲಸಗಾರನ ಮನೆಯಲ್ಲಿಯೇ ಆಗಲಿ ಅಥವಾ ಬೇರೊಬ್ಬ ವ್ಯಕ್ತಿಯ ನಿಯಂತ್ರಣ ಅಥವಾ ವ್ಯವಸ್ಥಾಪನೆಯಲ್ಲಿರುವ ಆವರಣವಲ್ಲದ ಯಾವುದೇ ಇತರ ಆವರಣದಲ್ಲಿಯೇ ಆಗಲಿ ಕಾರ್ಯವಿಧಾನವನ್ನು ನಡೆಸಬೇಕಾದಲ್ಲಿ, ಆ ಇತರ ವ್ಯಕ್ತಿಯು ವ್ಯಾಪಾರ ಅಥವಾ ವ್ಯವಹಾರದ ಉದ್ದೇಶಗಳಿಗಾಗಿ ಮಾರಾಟಕ್ಕಾಗಿ ಯಾವುದೇ ವಸ್ತುಗಳನ್ನು ಅಥವಾ ಸಾಮಗ್ರಿಗಳನ್ನು ತಯಾರಿಸಲು ಸ್ವಚ್ಛಗೊಳಿಸಲು, ತೊಳೆಯಲು, ಬದಲಾಯಿಸಲು, ಅಲಂಕರಿಸಲು, ಒಪ್ಪವಿಡಲು, ದುರಸ್ತಿ ಮಾಡಲು, ಅಳವಡಿಸಲು ಅಥವಾ ಅನ್ಯಥಾ ಸಂಸ್ಕರಿಸಲು ಯಾವುದೇ ವಸ್ತುಗಳು ಅಥವಾ ಸಾಮಗ್ರಿಗಳನ್ನು ಕೊಟ್ಟಿರುವ ಹೊರ ಕೆಲಸಗಾರನು ಒಳಗೊಳ್ಳುತ್ತಾನೆ; ಮತ್ತು ಸಮುಚಿತ ಸರ್ಕಾರವು ನಿಯೋಜಿತನೆಂಬುದಾಗಿ ಘೋಷಿಸಿದ ನಿಯೋಜಿತನು ಸಹ ಒಳಗೊಳ್ಳುತ್ತಾನೆ; ಆದರೆ ಒಕ್ಕೂಟದ ಸಶಸ್ತ್ರ ಬಲಗಳ ಯಾರೇ ಸದಸ್ಯನೂ ಒಳಗೊಳ್ಳುವುದಿಲ್ಲ.

3. **ಕನಿಷ್ಠ ಮಜೂರಿಗಳ ದರಗಳನ್ನು ನಿಗದಿಪಡಿಸುವುದು.–** (1) ಸಮುಚಿತ ಸರ್ಕಾರವು, ಇಲ್ಲಿ ಇನ್ನು ಮುಂದೆ ಉಪಬಂಧಿಸಿರುವ ರೀತಿಯಲ್ಲಿ,–

(ಎ) ಅನುಸೂಚಿಯ Iನೇ ಭಾಗ ಅಥವಾ IIನೇ ಭಾಗದಲ್ಲಿ ನಿರ್ದಿಷ್ಟಪಡಿಸಿದ ನಿಯೋಜನೆಯಲ್ಲಿ ಮತ್ತು ಪ್ರಕರಣ 27ರ ಮೇರೆಗೆ ಅಧಿಸೂಚನೆಯ ಮೂಲಕ ಎರಡರಲ್ಲಿ ಯಾವುದಾದರೂ ಒಂದು ಭಾಗಕ್ಕೆ ಸೇರಿಸಿದ

ನಿಯೋಜನೆಯಲ್ಲಿ, ನಿಯೋಜಿತರಾದ ನಿಯೋಜಿತರಿಗೆ ಸಂದಾಯವಾಗಬೇಕಾದ ಮಜೂರಿಗಳ ಕನಿಷ್ಠ ದರಗಳನ್ನು ನಿಗದಿಪಡಿಸತಕ್ಕದ್ದು:

ಪರಂತು, ಸಮುಚಿತ ಸರ್ಕಾರವು, ಅನುಸೂಚಿಯ IIನೇ ಭಾಗದಲ್ಲಿ ನಿರ್ದಿಷ್ಟಪಡಿಸಿದ ನಿಯೋಜನೆಯಲ್ಲಿ, ನಿಯೋಜಿತರಾದ ನಿಯೋಜಿತರಿಗೆ ಸಂಬಂಧಿಸಿದಂತೆ ಇಡೀ ರಾಜ್ಯಕ್ಕೆ ಈ ಖಂಡದ ಮೇರೆಗೆ ಮಜೂರಿಗಳ ಕನಿಷ್ಠ ದರಗಳನ್ನು ನಿಗದಿಪಡಿಸುವುದಕ್ಕೆ ಬದಲಾಗಿ ಅಂಥ ದರಗಳನ್ನು ರಾಜ್ಯದ ಒಂದು ಭಾಗಕ್ಕಾಗಿ ಅಥವಾ ಇಡೀ ರಾಜ್ಯ ಅಥವಾ ಅದರ ಭಾಗದಲ್ಲಿನ ಅಂಥ ನಿಯೋಜನೆಯ ಯಾವುದೇ ನಿರ್ದಿಷ್ಟಪಡಿಸಿದ ವರ್ಗ ಅಥವಾ ವರ್ಗಗಳಿಗಾಗಿ ನಿಗದಿಪಡಿಸಬಹುದು;

(ಬಿ) ಹಾಗೆ ನಿಗದಿಪಡಿಸಿದ ಮಜೂರಿಗಳ ಕನಿಷ್ಠ ದರಗಳನ್ನು ಅದು ಸೂಕ್ತವೆಂದು ಯೋಚಿಸಬಹುದಾದಂಥ ಮಧ್ಯಂತರದಲ್ಲಿ ಪುನರ್ ಅವಲೋಕಿಸತಕ್ಕದ್ದು. ಅಂಥ ಮಧ್ಯಂತರಗಳು ಐದು ವರ್ಷಗಳನ್ನು ಮೀರತಕ್ಕದ್ದಲ್ಲ ಮತ್ತು ಅವಶ್ಯವಿದ್ದರೆ ಕನಿಷ್ಠ ದರಗಳನ್ನು ಪರಿಷ್ಕರಿಸತಕ್ಕದ್ದು:

ಪರಂತು, ಸಮುಚಿತ ಸರ್ಕಾರವು ಐದು ವರ್ಷಗಳ ಮಧ್ಯಂತರಗಳಲ್ಲಿ ಯಾವುದೇ ಅನುಸೂಚಿತ ನಿಯೋಜನೆಗೆ ಸಂಬಂಧಿಸಿದಂತೆ ಅದು ಹಾಗೆ ನಿಗದಿಪಡಿಸಿದ ಮಜೂರಿಗಳ ಕನಿಷ್ಠ ದರಗಳನ್ನು ಯಾವುದೇ ಕಾರಣಕ್ಕಾಗಿ ಪುನರ್ ಅವಲೋಕಿಸದೆ ಇರುವಲ್ಲಿ, ಈ ಖಂಡದಲ್ಲಿ ಅಡಕವಾಗಿರುವುದು ಯಾವುದೂ ಸದರಿ ಐದು ವರ್ಷಗಳ ಅವಧಿಯ ಮುಕ್ತಾಯದ ತರುವಾಯ ಕನಿಷ್ಠ ದರಗಳನ್ನು ಪುನರ್ ಅವಲೋಕಿಸುವುದನ್ನು ಮತ್ತು ಅವಶ್ಯವಾದರೆ ಅವುಗಳನ್ನು ಪರಿಷ್ಕರಿಸುವುದನ್ನು ಪ್ರತಿಬಂಧಿಸುವುದಾಗಿ ಭಾವಿಸತಕ್ಕದ್ದಲ್ಲ ಮತ್ತು ಅವುಗಳನ್ನು ಹಾಗೆ ಪರಿಷ್ಕರಿಸುವವರೆಗೆ ಸದರಿ ಐದು ವರ್ಷಗಳ ಅವಧಿಯು ಮುಕ್ತಾಯವಾಗುವುದಕ್ಕೆ ನಿಕಟಪೂರ್ವದಲ್ಲಿ ಜಾರಿಯಲ್ಲಿದ್ದ ಕನಿಷ್ಠ ದರಗಳು ಜಾರಿಯಲ್ಲಿರುವುದು ಮುಂದುವರಿಯತಕ್ಕದ್ದು.

(1ಎ) ಉಪಪ್ರಕರಣ (1)ರಲ್ಲಿ ಏನೇ ಅಡಕವಾಗಿದ್ದರೂ, ಸಮುಚಿತ ಸರ್ಕಾರವು ಯಾವ ಅನುಸೂಚಿತ ನಿಯೋಜನೆಯಲ್ಲಿ ಇಡೀ ರಾಜ್ಯದಲ್ಲಿ ಅಂಥ ನಿಯೋಜನೆಯಲ್ಲಿ ತೊಡಗಿರುವ ನಿಯೋಜಿತರು ಒಂದು ಸಾವಿರಕ್ಕಿಂತ ಕಡಿಮೆ ಇರುವರೋ ಆ ಯಾವುದೇ ಅನುಸೂಚಿತ ನಿಯೋಜನೆಗೆ ಸಂಬಂಧಿಸಿದಂತೆ ಮಜೂರಿಗಳ ಕನಿಷ್ಠ ದರಗಳನ್ನು ನಿಗದಿಪಡಿಸದೆ ಇರಬಹುದು. ಆದರೆ ಯಾವುದೇ ಕಾಲದಲ್ಲಿ ಸಮುಚಿತ ಸರ್ಕಾರವು, ಈ ಬಗ್ಗೆ ಅದು ಮಾಡಬಹುದಾದ ಅಥವಾ ಮಾಡಿಸಬಹುದಾದಂಥ ವಿಚಾರಣೆಯ ತರುವಾಯ ಯಾವ ಅನುಸೂಚಿತ ನಿಯೋಜನೆಗೆ ಸಂಬಂಧಿಸಿದಂತೆ ಅದು ಮಜೂರಿಗಳ ಕನಿಷ್ಠ ದರಗಳನ್ನು ನಿಗದಿಪಡಿಸಿಲ್ಲವೋ, ಆ ಯಾವುದೇ ಅನುಸೂಚಿತ ನಿಯೋಜನೆಯಲ್ಲಿನ ನಿಯೋಜಿತರ ಸಂಖ್ಯೆಯು ಒಂದು ಸಾವಿರ ಅಥವಾ ಅದಕ್ಕಿಂತ ಹೆಚ್ಚಿಗೆ ಏರಿದೆ ಎಂದು ನಿರ್ಣಯಕ್ಕೆ ಬಂದರೆ ಅಂಥ ನಿಯೋಜನೆಯಲ್ಲಿನ ನಿಯೋಜಿತರಿಗೆ ಸಂದಾಯ ಮಾಡಬೇಕಾದ ಮಜೂರಿಗಳ ಕನಿಷ್ಠ ದರಗಳನ್ನು ಅಂಥ ನಿರ್ಣಯದ ತರುವಾಯ ಆದಷ್ಟು ಬೇಗನೆ ಅದು ನಿಗದಿಪಡಿಸತಕ್ಕದ್ದು.

(2) ಸಮುಚಿತ ಸರ್ಕಾರವು,–

(ಎ) ವೇಳಾ ಕೆಲಸಕ್ಕಾಗಿ ಮಜೂರಿಗಳ ಕನಿಷ್ಠ ದರವನ್ನು (ಇಲ್ಲಿ ಇನ್ನು ಮುಂದೆ "ಕನಿಷ್ಠ ವೇಳಾದರ" ಎಂದು ಉಲ್ಲೇಖಿಸಿದೆ);

(ಬಿ) ತುಂಡು ಕೆಲಸಕ್ಕಾಗಿ ಮಜೂರಿಗಳ ಕನಿಷ್ಠ ದರವನ್ನು (ಇಲ್ಲಿ ಇನ್ನು ಮುಂದೆ "ಕನಿಷ್ಠ ತುಂಡು ದರ" ಎಂದು ಉಲ್ಲೇಖಿಸಿದೆ);

(ಸಿ) ತುಂಡು ಕೆಲಸದಲ್ಲಿ ನಿಯೋಜಿತರಾದ ನಿಯೋಜಿತರ ಸಂದರ್ಭದಲ್ಲಿ ಅಂಥ ನಿಯೋಜಿತರಿಗೆ ವೇಳಾ ಕೆಲಸದ ಆಧಾರದ ಮೇಲೆ ಮಜೂರಿಗಳ ಕನಿಷ್ಠ ದರವನ್ನು (ಇಲ್ಲಿ ಇನ್ನು ಮುಂದೆ "ಖಾತರಿಪಡಿಸಿದ ವೇಳಾದರ" ಎಂದು ಉಲ್ಲೇಖಿಸಿದೆ) ಒದಗಿಸುವುದಕ್ಕಾಗಿ ಅವರಿಗೆ ಅನ್ವಯಿಸಬೇಕಾದ ಪರಿಶ್ರಮ ಧನದ ಕನಿಷ್ಠ ದರವನ್ನು;

(ಡಿ) ನಿಯೋಜಿತರು ಮಾಡಿದ ಅಧಿಕಕಾಲಿಕ ಕೆಲಸಕ್ಕೆ ಸಂಬಂಧಿಸಿದಂತೆ ಅನ್ಯಥಾ ಅನ್ವಯವಾಗಬಹುದಾದಂಥ ಕನಿಷ್ಠ ದರಗಳಿಗೆ ಬದಲಾಗಿ ಅನ್ವಯವಾಗುವ ಕನಿಷ್ಠ ದರವನ್ನು (ಅದು ವೇಳಾ ದರವಾಗಲಿ ಅಥವಾ ತುಂಡು ದರವಾಗಲಿ) (ಇಲ್ಲಿ ಇನ್ನು ಮುಂದೆ "ಅಧಿಕಕಾಲಿಕ ದರ" ಎಂದು ಉಲ್ಲೇಖಿಸಿದೆ)

- ನಿಗದಿಪಡಿಸಬಹುದು.

(2ಎ) ಒಂದು ಅನುಸೂಚಿತ ನಿಯೋಜನೆಯಲ್ಲಿ ನಿಯೋಜಿತರಾದ ಯಾರೇ ನಿಯೋಜಿತರಿಗೆ ಸಂದಾಯ ಮಾಡಬೇಕಾದ ಮಜೂರಿಗಳ ದರಗಳಿಗೆ ಸಂಬಂಧಪಟ್ಟ ಕೈಗಾರಿಕಾ ವಿವಾದಕ್ಕೆ ಸಂಬಂಧಿಸಿದಂತೆ ಕೈಗಾರಿಕಾ ವಿವಾದಗಳ ಅಧಿನಿಯಮ, 1947 (1947ರ 14)ರ ಮೇರೆಗೆ ಯಾವುದೇ ವ್ಯವಹರಣೆಯು ನ್ಯಾಯಾಧಿಕರಣ ಅಥವಾ ರಾಷ್ಟ್ರೀಯ ನ್ಯಾಯಾಧಿಕರಣದ ಮುಂದೆ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನ ಮೇರೆಗೆ ಅಂಥದೇ ಯಾವುದೇ ಪ್ರಾಧಿಕಾರದ ಮುಂದೆ ಇತ್ಯರ್ಥದಲ್ಲಿ ಇರುವಲ್ಲಿ ಅಥವಾ ಯಾವುದೇ ನ್ಯಾಯಾಧಿಕರಣ, ರಾಷ್ಟ್ರೀಯ ನ್ಯಾಯಾಧಿಕರಣ ಅಥವಾ ಅಂಥದೇ ಪ್ರಾಧಿಕಾರವು ಕೊಟ್ಟ ಐತೀರ್ಪು ಪ್ರವರ್ತನೆಯಲ್ಲಿ ಇರುವಲ್ಲಿ ಮತ್ತು ಆ ಅನುಸೂಚಿತ ನಿಯೋಜನೆಗೆ ಸಂಬಂಧಿಸಿದಂತೆ ಮಜೂರಿಗಳ ಕನಿಷ್ಠ ದರಗಳನ್ನು ನಿಗದಿಪಡಿಸುವ ಅಥವಾ ಪರಿಷ್ಕರಿಸಿರುವ ಅಧಿಸೂಚನೆಯನ್ನು, ಅಂಥ ವ್ಯವಹರಣೆಯು ಇತ್ಯರ್ಥದಲ್ಲಿ ಇರುವಾಗ ಅಥವಾ ಐತೀರ್ಪು ಪ್ರವರ್ತನೆಯಲ್ಲಿರುವಾಗ ಹೊರಡಿಸಿದರೆ, ಆಗ ಈ ಅಧಿನಿಯಮದಲ್ಲಿ ಏನೇ ಅಡಕವಾಗಿದ್ದಾಗ್ಯೂ, ಹಾಗೆ ನಿಗದಿಪಡಿಸಿದ ಅಥವಾ ಹಾಗೆ ಪರಿಷ್ಕರಿಸಿದ ಮಜೂರಿಗಳ ಕನಿಷ್ಠ ದರಗಳು, ಆ ವ್ಯವಹರಣೆಯು ಇತ್ಯರ್ಥದಲ್ಲಿರುವ ಮತ್ತು ಅದರಲ್ಲಿ ಕೊಟ್ಟ ಐತೀರ್ಪು ಪ್ರವರ್ತನೆಯಲ್ಲಿರುವ ಅವಧಿಯಲ್ಲಿ ಅಥವಾ ಸಂದರ್ಭಾನುಸಾರ ಐತೀರ್ಪುವಿನ ಪ್ರವರ್ತನೆಯ ಅವಧಿಯಲ್ಲಿ ಅಧಿಸೂಚನೆಯನ್ನು ಹೊರಡಿಸಿರುವಲ್ಲಿ ಆ ನಿಯೋಜಿತರಿಗೆ ಅನ್ವಯವಾಗತಕ್ಕದ್ದಲ್ಲ ಮತ್ತು ಅಂಥ ವ್ಯವಹರಣೆ ಅಥವಾ ಐತೀರ್ಪು ಅನುಸೂಚಿತ ನಿಯೋಜನೆಯಲ್ಲಿನ ಎಲ್ಲಾ ನಿಯೋಜಿತರಿಗೆ ಸಂದಾಯಮಾಡಬೇಕಾದ ಮಜೂರಿಗಳ ದರಗಳಿಗೆ ಸಂಬಂಧಪಟ್ಟಿರುವಲ್ಲಿ ಸದರಿ ಅವಧಿಯಲ್ಲಿ ಆ ನಿಯೋಜನೆಗೆ ಸಂಬಂಧಿಸಿದಂತೆ ಯಾವುದೇ ಮಜೂರಿಗಳ ಕನಿಷ್ಠ ದರಗಳನ್ನು ನಿಗದಿಪಡಿಸತಕ್ಕದ್ದಲ್ಲ ಅಥವಾ ಪರಿಷ್ಕರಿಸತಕ್ಕದ್ದಲ್ಲ.

(3) ಈ ಪ್ರಕರಣದ ಮೇರೆಗೆ ಮಜೂರಿಗಳ ಕನಿಷ್ಠ ದರಗಳನ್ನು ನಿಗದಿಪಡಿಸುವಲ್ಲಿ ಅಥವಾ ಪರಿಷ್ಕರಿಸುವಲ್ಲಿ,–

(ಎ) ಬೇರೆ ಬೇರೆ ಮಜೂರಿಗಳ ಕನಿಷ್ಠ ದರಗಳನ್ನು,–

(i) ಬೇರೆ ಬೇರೆ ಅನುಸೂಚಿತ ನಿಯೋಜನೆಗಳಿಗಾಗಿ;

(ii) ಅದೇ ಅನುಸೂಚಿತ ನಿಯೋಜನೆಯಲ್ಲಿ ಕೆಲಸದ ಬೇರೆ ಬೇರೆ ವರ್ಗಗಳಿಗಾಗಿ;

(iii) ವಯಸ್ಕರು, ಯುವಕರು, ಮಕ್ಕಳು ಮತ್ತು ಉಮೇದುದಾರರಿಗಾಗಿ;

(iv) ಬೇರೆ ಬೇರೆ ಸ್ಥಳಗಳಿಗಾಗಿ

– ನಿಗದಿಪಡಿಸಬಹುದು;

(ಬಿ) ಈ ಕೆಳಕಂಡ ಯಾವುದೇ ಒಂದು ಅಥವಾ ಅದಕ್ಕಿಂತ ಹೆಚ್ಚಿನ ಮಜೂರಿ ಅವಧಿಗಳಿಗನುಸಾರವಾಗಿ ಮಜೂರಿಗಳ ಕನಿಷ್ಠ ದರಗಳನ್ನು ನಿಗದಿಪಡಿಸಬಹುದು, ಎಂದರೆ:–

(i) ಗಂಟೆಗೆ ಅನುಸಾರವಾಗಿ;

(ii) ದಿವಸಕ್ಕೆ ಅನುಸಾರವಾಗಿ;

(iii) ತಿಂಗಳಿಗೆ ಅನುಸಾರವಾಗಿ; ಅಥವಾ

(iv) ನಿಯಮಿಸಬಹುದಾದಂಥ ಇತರ ದೊಡ್ಡ ಮಜೂರಿ ಅವಧಿಗೆ ಅನುಸಾರವಾಗಿ; ಮತ್ತು ಅಂಥ ದರಗಳನ್ನು ದಿವಸಕ್ಕೆ ಅನುಸಾರವಾಗಿ ಅಥವಾ ತಿಂಗಳಿಗನುಸಾರವಾಗಿ ನಿಗದಿಪಡಿಸಿರುವಲ್ಲಿ, ಸಂದರ್ಭಾನುಸಾರ ತಿಂಗಳಿಗಾಗಿ ಅಥವಾ ದಿವಸಕ್ಕಾಗಿನ ಮಜೂರಿಗಳನ್ನು ಲೆಕ್ಕ ಹಾಕುವ ರೀತಿಯನ್ನು ಸೂಚಿಸಬಹುದು:

ಪರಂತು, ಮಜೂರಿ ಸಂದಾಯ ಅಧಿನಿಯಮ, 1936 (1936ರ 4)ರ ಪ್ರಕರಣ 4ರ ಮೇರೆಗೆ ಯಾವುದೇ ಮಜೂರಿ ಅವಧಿಗಳನ್ನು ನಿಗದಿಪಡಿಸಿರುವಲ್ಲಿ, ಕನಿಷ್ಠ ಮಜೂರಿಗಳನ್ನು ಅದಕ್ಕನುಸಾರವಾಗಿ ನಿಗದಿಪಡಿಸತಕ್ಕದ್ದು.

4. **ಮಜೂರಿಗಳ ಕನಿಷ್ಠ ದರ.–** (1) ಅನುಸೂಚಿತ ನಿಯೋಜನೆಗಳಿಗೆ ಸಂಬಂಧಿಸಿದಂತೆ ಸಮುಚಿತ ಸರ್ಕಾರವು, ಪ್ರಕರಣ 3ರ ಮೇರೆಗೆ ನಿಗದಿಪಡಿಸಿದ ಅಥವಾ ಪರಿಷ್ಕರಿಸಿದ ಮಜೂರಿಗಳ ಯಾವುದೇ ಕನಿಷ್ಠ ದರವು,–

(i) ಮಜೂರಿಗಳ ಮೂಲದರ ಮತ್ತು ಅಂಥ ಕೆಲಸಗಾರರಿಗೆ ಅನ್ವಯವಾಗುವ ಜೀವನ ವೆಚ್ಚ ಸೂಚ್ಯಂಕದಲ್ಲಿನ ವ್ಯತ್ಯಾಸದೊಂದಿಗೆ ಕಾರ್ಯಸಾಧ್ಯವಾದಷ್ಟು ಮಟ್ಟಿಗೆ ಹೊಂದಿಕೊಳ್ಳುವಂತೆ ಸಮುಚಿತ ಸರ್ಕಾರವು ನಿರ್ದೇಶಿಸಬಹುದಾದಂಥ ಮಧ್ಯಂತರಗಳಲ್ಲಿ ಮತ್ತು ಅಂಥ ರೀತಿಯಲ್ಲಿ ಹೊಂದಿಸಬೇಕಾದ ದರದಲ್ಲಿ ವಿಶೇಷ ಭತ್ಯೆ (ಇಲ್ಲಿ ಇನ್ನು ಮುಂದೆ "ಜೀವನಭತ್ಯೆಯ ಖರ್ಚು" ಎಂದು ಉಲ್ಲೇಖಿಸಿದೆ); ಅಥವಾ

(ii) ಜೀವನಭತ್ಯೆಯ ಖರ್ಚಿನೊಂದಿಗೆ ಅಥವಾ ಅದಿಲ್ಲದೆಯೇ ಮಜೂರಿಗಳ ಮೂಲದರ ಮತ್ತು ಅಧಿಕೃತಗೊಳಿಸಿರುವಲ್ಲಿ ಅತ್ಯಾವಶ್ಯಕ ವಸ್ತುಗಳನ್ನು ರಿಯಾಯಿತಿ ದರಗಳಲ್ಲಿ ಸರಬರಾಜು ಮಾಡುವುದಕ್ಕೆ ಸಂಬಂಧಿಸಿದಂತೆ ರಿಯಾಯಿತಿಗಳ ನಗದು ಮೌಲ್ಯ; ಅಥವಾ

(iii) ಮೂಲ ದರಕ್ಕೆ ಅವಕಾಶ ಮಾಡಿಕೊಡುವ ಎಲ್ಲವನ್ನು ಒಳಗೊಂಡ ದರ, ಜೀವನ ಭತ್ಯೆಯ ಖರ್ಚು ಮತ್ತು ರಿಯಾಯಿತಿಗಳ ನಗದು ಮೌಲ್ಯ

– ಯಾವುದಾದರೂ ಇದ್ದರೆ, ಅದು ಇವುಗಳನ್ನು ಒಳಗೊಳ್ಳಬಹುದು.

(2) ಜೀವನಭತ್ಯೆಯ ಖರ್ಚು ಮತ್ತು ಅತ್ಯಾವಶ್ಯಕ ವಸ್ತುಗಳನ್ನು ರಿಯಾಯಿತಿ ದರಗಳಲ್ಲಿ ಸರಬರಾಜು ಮಾಡುವುದಕ್ಕೆ ಸಂಬಂಧಿಸಿದಂತೆ ರಿಯಾಯಿತಿಗಳ ನಗದು ಮೌಲ್ಯವನ್ನು ಸಮುಚಿತ ಸರ್ಕಾರವು ನಿರ್ದಿಷ್ಟಪಡಿಸಬಹುದಾದಂಥ ಮಧ್ಯಂತರಗಳಲ್ಲಿ ಮತ್ತು ಅಂಥ ನಿರ್ದೇಶನಗಳಿಗೆ ಅನುಸಾರವಾಗಿ ಸಕ್ಷಮ ಪ್ರಾಧಿಕಾರಿಯು ಲೆಕ್ಕಹಾಕತಕ್ಕದ್ದು.

5. **ಕನಿಷ್ಠ ಮಜೂರಿಗಳನ್ನು ನಿಗದಿಪಡಿಸುವ ಮತ್ತು ಪರಿಷ್ಕರಿಸುವುದಕ್ಕಾಗಿನ ಪ್ರಕ್ರಿಯೆ.–** (1) ಈ ಅಧಿನಿಯಮದ ಮೇರೆಗೆ ಮೊದಲ ಬಾರಿಗೆ ಯಾವುದೇ ಅನುಸೂಚಿತ ನಿಯೋಜನೆಗೆ ಸಂಬಂಧಿಸಿದಂತೆ ಮಜೂರಿಗಳ ಕನಿಷ್ಠ ದರಗಳನ್ನು ನಿಗದಿಪಡಿಸುವಲ್ಲಿ ಅಥವಾ ಹಾಗೆ ನಿಗದಿಪಡಿಸಲಾದ ಮಜೂರಿಗಳ ಕನಿಷ್ಠ ದರಗಳನ್ನು ಪರಿಷ್ಕರಿಸುವಲ್ಲಿ ಸಮುಚಿತ ಸರ್ಕಾರವು,–

(ಎ) ಸಂದರ್ಭಾನುಸಾರ ಅಂಥ ನಿಗದಿಪಡಿಸುವಿಕೆಗೆ ಅಥವಾ ಪರಿಷ್ಕರಣೆಗೆ ಸಂಬಂಧಿಸಿದಂತೆ ವಿಚಾರಣೆಗಳನ್ನು ನಡೆಸಲು ಮತ್ತು ಅದಕ್ಕೆ ಸಲಹೆ ನೀಡಲು ಅದು ಅವಶ್ಯವೆಂದು ಪರ್ಯಾಲೋಚಿಸುವಷ್ಟು ಸಮಿತಿಗಳು ಮತ್ತು ಉಪಸಮಿತಿಗಳನ್ನು ನೇಮಕ ಮಾಡತಕ್ಕದ್ದು; ಅಥವಾ

(ಬಿ) ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಅದರ ಪ್ರಸ್ತಾವಗಳಿಂದ ಬಾಧಿತರಾಗುವ ಸಂಭವವಿರುವ ವ್ಯಕ್ತಿಗಳ ಮಾಹಿತಿಗಾಗಿ ಅವುಗಳನ್ನು ಪ್ರಕಟಿಸತಕ್ಕದ್ದು ಮತ್ತು ಅಧಿಸೂಚನೆಯ ದಿನಾಂಕದಿಂದ ಎರಡು ತಿಂಗಳುಗಳಿಗೆ ಕಡಿಮೆಯಿಲ್ಲದ ಯಾವ ದಿನಾಂಕದಂದು ಆ ಪ್ರಸ್ತಾವಗಳನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳಲಾಗುವುದೋ ಆ ದಿನಾಂಕವನ್ನು ನಿರ್ದಿಷ್ಟಪಡಿಸತಕ್ಕದ್ದು.

(2) ಉಪಪ್ರಕರಣ (1)ರ ಖಂಡ (ಎ)ಯ ಮೇರೆಗೆ ನೇಮಕಗೊಂಡ ಸಮಿತಿಯ ಅಥವಾ ಸಮಿತಿಗಳ ಸಲಹೆಯನ್ನು ಅಥವಾ ಸಂದರ್ಭಾನುಸಾರ, ಆ ಉಪಪ್ರಕರಣದ ಖಂಡ (ಬಿ)ಯ ಮೇರೆಗಿನ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ದಿನಾಂಕಕ್ಕೆ ಮುಂಚೆ ಅದು ಸ್ವೀಕರಿಸಿದ ಎಲ್ಲಾ ಮನವಿಗಳನ್ನು ಪರ್ಯಾಲೋಚಿಸಿದ ತರುವಾಯ ಸಮುಚಿತ ಸರ್ಕಾರವು, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಪ್ರತಿಯೊಂದು ಅನುಸೂಚಿತ ನಿಯೋಜನೆಗೆ ಸಂಬಂಧಿಸಿದಂತೆ ಮಜೂರಿಗಳ ಕನಿಷ್ಠ ದರಗಳನ್ನು ನಿಗದಿಪಡಿಸತಕ್ಕದ್ದು ಅಥವಾ ಸಂರ್ಭಾನುಸಾರ ಪರಿಷ್ಕರಿಸತಕ್ಕದ್ದು ಮತ್ತು ಅಂಥ ಅಧಿಸೂಚನೆಯ ಅನ್ಯಥಾ ಉಪಬಂಧಿಸಿದ ಹೊರತು, ಅದನ್ನು ಹೊರಡಿಸಿದ ದಿನಾಂಕದಿಂದ ಮೂರು ತಿಂಗಳುಗಳು ಮುಕ್ತಾಯವಾದ ಮೇಲೆ ಅದು ಜಾರಿಗೆ ಬರತಕ್ಕದ್ದು:

ಪರಂತು ಸಮುಚಿತ ಸರ್ಕಾರವು, ಉಪಪ್ರಕರಣ (1)ರ ಖಂಡ (ಬಿ)ನಲ್ಲಿ ನಿರ್ದಿಷ್ಟಪಡಿಸಿದ ವಿಧಾನದ ಮೂಲಕ ಮಜೂರಿಗಳ ಕನಿಷ್ಠ ದರಗಳನ್ನು ಪರಿಷ್ಕರಿಸಲು ಉದ್ದೇಶಿಸಿದರೆ, ಸಮುಚಿತ ಸರ್ಕಾರವು ಸಲಹಾ ಮಂಡಳಿಯೊಂದಿಗೆ ಸಹ ಸಮಾಲೋಚಿಸತಕ್ಕದ್ದು.

**6.** [**ಬಿಟ್ಟುಬಿಡಲಾಗಿದೆ.**]

**7. ಸಲಹಾ ಮಂಡಳಿ.–** ಪ್ರಕರಣ 5ರ ಮೇರೆಗೆ ನೇಮಕಗೊಂಡ ಸಮಿತಿಗಳ ಮತ್ತು ಉಪಸಮಿತಿಗಳ ಕೆಲಸವನ್ನು ಸಮನ್ವಯಗೊಳಿಸುವ ಉದ್ದೇಶಕ್ಕಾಗಿ ಮತ್ತು ಸಾಮಾನ್ಯವಾಗಿ ಮಜೂರಿಗಳ ಕನಿಷ್ಠ ದರಗಳನ್ನು ನಿಗದಿಪಡಿಸುವ ಮತ್ತು ಪರಿಷ್ಕರಿಸುವ ವಿಷಯದಲ್ಲಿ ಸಮುಚಿತ ಸರ್ಕಾರಕ್ಕೆ ಸಲಹೆ ನೀಡಲು ಸಮುಚಿತ ಸರ್ಕಾರವು ಒಂದು ಸಲಹಾ ಮಂಡಳಿಯನ್ನು ನೇಮಕ ಮಾಡತಕ್ಕದ್ದು.

**8. ಕೇಂದ್ರ ಸಲಹಾ ಮಂಡಳಿ.–** (1) ಈ ಅಧಿನಿಯಮದ ಮೇರೆಗೆ ಮಜೂರಿಗಳ ಕನಿಷ್ಠ ದರಗಳನ್ನು ನಿಗದಿಪಡಿಸುವ ಮತ್ತು ಪರಿಷ್ಕರಿಸುವ ವಿಷಯಗಳಲ್ಲಿ ಮತ್ತು ಇತರ ವಿಷಯಗಳಲ್ಲಿ ಕೇಂದ್ರ ಸರ್ಕಾರಕ್ಕೆ ಮತ್ತು ರಾಜ್ಯ ಸರ್ಕಾರಗಳಿಗೆ ಸಲಹೆ ನೀಡುವ ಉದ್ದೇಶಕ್ಕಾಗಿ ಮತ್ತು ಸಲಹಾ ಮಂಡಳಿಗಳ ಕೆಲಸವನ್ನು ಸಮನ್ವಯಗೊಳಿಸುವುದಕ್ಕಾಗಿ ಕೇಂದ್ರ ಸರ್ಕಾರವು ಒಂದು ಕೇಂದ್ರ ಸಲಹಾ ಮಂಡಳಿಯನ್ನು ನೇಮಕ ಮಾಡತಕ್ಕದ್ದು.

(2) ಕೇಂದ್ರ ಸಲಹಾ ಮಂಡಳಿಯು, ಅನುಸೂಚಿತ ನಿಯೋಜನೆಗಳಲ್ಲಿನ ನಿಯೋಜಕರು ಮತ್ತು ನಿಯೋಜಿತರನ್ನು ಪ್ರತಿನಿಧಿಸುವ, ಸಮಾನ ಸಂಖ್ಯೆಯಲ್ಲಿ ಕೇಂದ್ರ ಸರ್ಕಾರವು ನಾಮನಿರ್ದೇಶನ ಮಾಡಬೇಕಾದ ವ್ಯಕ್ತಿಗಳನ್ನು ಮತ್ತು ಅದರ ಒಟ್ಟು ಸದಸ್ಯರ ಸಂಖ್ಯೆಯ ಮೂರನೇ ಒಂದರಷ್ಟನ್ನು ಮೀರದ ಸ್ವತಂತ್ರ ವ್ಯಕ್ತಿಗಳನ್ನು ಒಳಗೊಂಡಿರತಕ್ಕದ್ದು; ಅಂಥ ಸ್ವತಂತ್ರ ವ್ಯಕ್ತಿಗಳಲ್ಲಿ ಒಬ್ಬನನ್ನು ಕೇಂದ್ರ ಸರ್ಕಾರವು ಮಂಡಳಿಯ ಅಧ್ಯಕ್ಷನನ್ನಾಗಿ ನೇಮಕ ಮಾಡತಕ್ಕದ್ದು.

**9. ಸಮಿತಿ, ಮುಂತಾದವುಗಳ ರಚನೆ.–** ಪ್ರತಿಯೊಂದು ಸಮಿತಿ, ಉಪಸಮಿತಿ ಮತ್ತು ಸಲಹಾ ಮಂಡಳಿಯು ಅನುಸೂಚಿತ ನಿಯೋಜನೆಗಳಲ್ಲಿನ ನಿಯೋಜಕರು ಮತ್ತು ನಿಯೋಜಿತರನ್ನು ಪ್ರತಿನಿಧಿಸುವ ಸಮಾನ ಸಂಖ್ಯೆಯಲ್ಲಿ, ಸಮುಚಿತ ಸರ್ಕಾರವು ನಾಮನಿರ್ದೇಶನ ಮಾಡುವ ವ್ಯಕ್ತಿಗಳನ್ನು ಮತ್ತು ಅವರ ಒಟ್ಟು ಸಂಖ್ಯೆಯ ಮೂರನೇ ಒಂದರಷ್ಟನ್ನು ಮೀರದ ಸ್ವತಂತ್ರ ವ್ಯಕ್ತಿಗಳನ್ನು ಒಳಗೊಂಡಿರತಕ್ಕದ್ದು; ಅಂಥ ಸ್ವತಂತ್ರ ವ್ಯಕ್ತಿಗಳಲ್ಲಿ ಒಬ್ಬನನ್ನು ಸಮುಚಿತ ಸರ್ಕಾರವು ಅಧ್ಯಕ್ಷನನ್ನಾಗಿ ನೇಮಕ ಮಾಡತಕ್ಕದ್ದು.

**10. ತಪ್ಪುಗಳ ಸರಿಪಡಿಕೆ.–** (1) ಸಮುಚಿತ ಸರ್ಕಾರವು, ಯಾವುದೇ ಕಾಲದಲ್ಲಿ, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಮೇರೆಗೆ ಮಜೂರಿಗಳ ಕನಿಷ್ಠ ದರಗಳನ್ನು ನಿಗದಿಪಡಿಸುವ ಅಥವಾ ಪರಿಷ್ಕರಿಸುವ ಯಾವುದೇ ಆದೇಶದಲ್ಲಿನ ಲಿಪಿಕ ಅಥವಾ ಗಣಿತದಲ್ಲಿನ ತಪ್ಪುಗಳನ್ನು ಅಥವಾ ಯಾವುದೇ ಆಕಸ್ಮಿಕ ಕೈತಪ್ಪು ಅಥವಾ ಲೋಪದಿಂದ ಅದರಲ್ಲಿ ಉಂಟಾಗುವ ತಪ್ಪುಗಳನ್ನು ಸರಿಪಡಿಸಬಹುದು.

(2) ಅಂಥ ಪ್ರತಿಯೊಂದು ಅಧಿಸೂಚನೆಯನ್ನು, ಅದನ್ನು ಹೊರಡಿಸಿದ ತರುವಾಯ ಸಾಧ್ಯವಾದಷ್ಟು ಬೇಗ ಮಾಹಿತಿಗಾಗಿ ಸಲಹಾ ಮಂಡಳಿಯ ಮುಂದೆ ಇಡತಕ್ಕದ್ದು.

**11. ವಸ್ತುರೂಪದಲ್ಲಿ ಮಜೂರಿಗಳು.–** (1) ಈ ಅಧಿನಿಯಮದ ಮೇರೆಗೆ ಸಂದಾಯ ಮಾಡಬೇಕಾದ ಕನಿಷ್ಠ ಮಜೂರಿಗಳನ್ನು ನಗದು ರೂಪದಲ್ಲಿ ಸಂದಾಯ ಮಾಡತಕ್ಕದ್ದು.

(2) ಮಜೂರಿಗಳನ್ನು ಪೂರ್ಣವಾಗಿ ಅಥವಾ ಭಾಗಶಃ ವಸ್ತುರೂಪದಲ್ಲಿ ಸಂದಾಯ ಮಾಡುವುದು ರೂಢಿಯಾಗಿರುವಲ್ಲಿ, ಸಮುಚಿತ ಸರ್ಕಾರವು ಪ್ರಕರಣದ ಸನ್ನಿವೇಶಗಳಲ್ಲಿ ಅದು ಅವಶ್ಯಕವೆಂದು ಅಭಿಪ್ರಾಯವನ್ನು ಹೊಂದಿರುವಲ್ಲಿ, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಕನಿಷ್ಠ ಮಜೂರಿಗಳ ಸಂದಾಯವನ್ನು ವಸ್ತುರೂಪದಲ್ಲಿ ಪೂರ್ಣವಾಗಿಯೇ ಆಗಲಿ ಅಥವಾ ಭಾಗಶಃವಾಗಿಯೇ ಆಗಲಿ ಅಧಿಕೃತಗೊಳಿಸಬಹುದು.

(3) ಸಮುಚಿತ ಸರ್ಕಾರವು, ಅತ್ಯಾವಶ್ಯಕ ವಸ್ತುಗಳನ್ನು ರಿಯಾಯಿತಿ ದರಗಳಲ್ಲಿ ಸರಬರಾಜು ಮಾಡಲು ವ್ಯವಸ್ಥೆಯನ್ನು ಮಾಡಬೇಕೆಂದು ಅಭಿಪ್ರಾಯಪಟ್ಟರೆ ಸಮುಚಿತ ಸರ್ಕಾರವು, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆ ಮೂಲಕ ರಿಯಾಯಿತಿ ದರಗಳಲ್ಲಿ ಅಂಥ ಸರಬರಾಜುಗಳ ವ್ಯವಸ್ಥೆಯನ್ನು ಅಧಿಕೃತಗೊಳಿಸಬಹುದು.

(4) ವಸ್ತುರೂಪದಲ್ಲಿನ ಮಜೂರಿಗಳ ಮತ್ತು ಉಪಪ್ರಕರಣ (2) ಮತ್ತು (3)ರ ಮೇರೆಗೆ ಅಧಿಕೃತಗೊಳಿಸಿದ ರಿಯಾಯಿತಿ ದರಗಳಲ್ಲಿ ಅತ್ಯಾವಶ್ಯಕ ವಸ್ತುಗಳ ಸರಬರಾಜುಗಳಿಗೆ ಸಂಬಂಧಿಸಿದಂತೆ ರಿಯಾಯಿತಿಗಳ ನಗದು ಮೌಲ್ಯವನ್ನು ನಿಯಮಿಸಿದ ರೀತಿಯಲ್ಲಿ ಅಂದಾಜು ಮಾಡತಕ್ಕದ್ದು.

**12. ಮಜೂರಿಗಳ ಕನಿಷ್ಠ ದರಗಳ ಸಂದಾಯ.–** (1) ಯಾವುದೇ ಅನುಸೂಚಿತ ನಿಯೋಜನೆಗೆ ಸಂಬಂಧಿಸಿದಂತೆ ಪ್ರಕರಣ 5ರ ಮೇರೆಗಿನ ಅಧಿಸೂಚನೆಯು ಜಾರಿಯಲ್ಲಿ ಇರುವಲ್ಲಿ, ನಿಯೋಜಕನು ಅವನ ಅಧೀನದಲ್ಲಿನ ಅನುಸೂಚಿತ ನಿಯೋಜನೆಯಲ್ಲಿ ತೊಡಗಿರುವ ಪ್ರತಿಯೊಬ್ಬ ನಿಯೋಜಿತನಿಗೆ ಆ ನಿಯೋಜನೆಯಲ್ಲಿನ ಆ ನಿಯೋಜಿತರ ವರ್ಗಕ್ಕಾಗಿ ಅಂಥ ಅಧಿಸೂಚನೆಯ ಮೂಲಕ ನಿಗದಿಪಡಿಸಿದ ಮಜೂರಿಗಳ ಕನಿಷ್ಠ ದರಕ್ಕಿಂತ ಕಡಿಮೆಯಲ್ಲದ ದರದಲ್ಲಿ ಮಜೂರಿಗಳನ್ನು, ನಿಯಮಿಸಬಹುದಾದಂಥ ಕಾಲದೊಳಗೆ ಮತ್ತು ಅಂಥ ಷರತ್ತುಗಳಿಗೆ ಒಳಪಟ್ಟು, ಅಧಿಕೃತಗೊಳಿಸಬಹುದಾದಂಥವುಗಳನ್ನು ಹೊರತುಪಡಿಸಿ ಯಾವುದೇ ಕಳೆತಗಳು ಇಲ್ಲದೆ ಸಂದಾಯ ಮಾಡತಕ್ಕದ್ದು.

(2) ಈ ಪ್ರಕರಣದಲ್ಲಿ ಇರುವುದು ಯಾವುದೂ ಮಜೂರಿಗಳ ಸಂದಾಯ ಅಧಿನಿಯಮ, 1936 (1936ರ 4)ರ ಉಪಬಂಧಗಳಿಗೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

**13. ಸಾಮಾನ್ಯ ಕೆಲಸದ ದಿವಸ, ಮುಂತಾದವುಗಳಿಗಾಗಿ ವೇಳೆಗಳನ್ನು ನಿಗದಿಪಡಿಸುವುದು.–** (1) ಈ ಅಧಿನಿಯಮದ ಮೇರೆಗೆ ಯಾವ ಅನುಸೂಚಿತ ನಿಯೋಜನೆಗೆ ಸಂಬಂಧಿಸಿದಂತೆ ಮಜೂರಿಗಳ ಕನಿಷ್ಠ ದರಗಳನ್ನು ನಿಗದಿಪಡಿಸಲಾಗಿದೆಯೋ ಆ ಯಾವುದೇ ಅನುಸೂಚಿತ ನಿಯೋಜನೆಯ ಬಗ್ಗೆ ಸಮುಚಿತ ಸರ್ಕಾರವು,–

(ಎ) ಒಂದು ಅಥವಾ ಹೆಚ್ಚು ನಿರ್ದಿಷ್ಟಪಡಿಸಿದ ಮಧ್ಯಂತರಗಳನ್ನು ಒಳಗೊಂಡು ಒಂದು ಸಾಮಾನ್ಯ ಕೆಲಸದ ದಿವಸವು ಆಗತಕ್ಕಂಥ ಕೆಲಸದ ಗಂಟೆಗಳ ಸಂಖ್ಯೆಯನ್ನು ನಿಗದಿಪಡಿಸಬಹುದು;

(ಬಿ) ಎಲ್ಲಾ ನಿಯೋಜಿತರಿಗೆ ಅಥವಾ ನಿಯೋಜಿತರ ಯಾವುದೇ ನಿರ್ದಿಷ್ಟಪಡಿಸಿದ ವರ್ಗಕ್ಕೆ ಅನುಮತಿಸತಕ್ಕಂಥ ಏಳು ದಿವಸಗಳ ಪ್ರತಿಯೊಂದು ಅವಧಿಯಲ್ಲಿ ಒಂದು ವಿಶ್ರಾಂತಿ ದಿವಸಕ್ಕಾಗಿ ಮತ್ತು ಅಂಥ ವಿಶ್ರಾಂತಿಯ ದಿವಸಗಳಿಗೆ ಸಂಬಂಧಿಸಿದಂತೆ ಪರಿಶ್ರಮ ಧನದ ಸಂದಾಯಕ್ಕಾಗಿ ವ್ಯವಸ್ಥೆ ಮಾಡಬಹುದು;

(ಸಿ) ವಿಶ್ರಾಂತಿ ದಿವಸದ ಕೆಲಸಕ್ಕಾಗಿ ಅಧಿಕಕಾಲಿಕ ದರಕ್ಕಿಂತ ಕಡಿಮೆಯಿಲ್ಲದ ದರದಲ್ಲಿ ಸಂದಾಯಕ್ಕಾಗಿ ವ್ಯವಸ್ಥೆ ಮಾಡಬಹುದು.

(2) ಉಪಪ್ರಕರಣ (1)ರ ಉಪಬಂಧಗಳು, ಈ ಕೆಳಕಂಡ ನಿಯೋಜಿತರ ವರ್ಗಗಳಿಗೆ ಸಂಬಂಧಪಟ್ಟಂಥ ನಿಯಮಿಸಬಹುದಾದಷ್ಟರಮಟ್ಟಿಗೆ ಮತ್ತು ಅಂಥ ಷರತ್ತುಗಳಿಗೆ ಒಳಪಟ್ಟು ಮಾತ್ರ ಅನ್ವಯವಾಗತಕ್ಕದ್ದು,–

(ಎ) ತುರ್ತು ಕೆಲಸದಲ್ಲಿ ಅಥವಾ ಮುಂಗಾಣಲು ಅಥವಾ ತಡೆಯಲು ಆಗದಿದ್ದಂಥ ಯಾವುದೇ ತುರ್ತು ಪರಿಸ್ಥಿತಿಯಲ್ಲಿ ನಿರತರಾದ ನಿಯೋಜಿತರು;

(ಬಿ) ಸಂಬಂಧಿಸಿದ ನಿಯೋಜನೆಯಲ್ಲಿ ಸಾಮಾನ್ಯ ಕೆಲಸಕ್ಕಾಗಿ ವಿಧಿಸಲಾದ ಪರಿಮಿತಿಗಳ ಹೊರಗೆ ಅವಶ್ಯಕವಾಗಿ ನಡೆಸಲೇಬೇಕಾದಂಥ ಪ್ರಾರಂಭಿಕ ಸ್ವರೂಪದ ಕೆಲಸದಲ್ಲಿ ಅಥವಾ ಪೂರಕ ಕೆಲಸದಲ್ಲಿ ನಿರತರಾದ ನಿಯೋಜಿತರು;

(ಸಿ) ಯಾವ ನಿಯೋಜಿತರ ನಿಯೋಜನೆಯು ಹೆಚ್ಚಾಗಿ ಬಿಟ್ಟು ಬಿಟ್ಟು ಬರುವುದೋ ಆ ನಿಯೋಜಿತರು;

(ಡಿ) ಯಾವ ಕೆಲಸವನ್ನು, ತಾಂತ್ರಿಕ ಕಾರಣಗಳಿಗಾಗಿ ಕರ್ತವ್ಯವು ಮುಗಿಯುವುದಕ್ಕೆ ಮುಂಚೆ ಮುಗಿಸಬೇಕಾಗಿದೆಯೋ ಆ ಯಾವುದೇ ಕೆಲಸದಲ್ಲಿ ನಿರತರಾದ ನಿಯೋಜಿತರು;

(ಇ) ಯಾವ ಕೆಲಸವನ್ನು ನೈಸರ್ಗಿಕ ಶಕ್ತಿಗಳ ಅನಿಯಮಿತ ಕ್ರಿಯೆಯನ್ನು ಅವಲಂಬಿಸಿರುವ ಕಾಲಗಳಲ್ಲಿ ಹೊರತು ನಡೆಸಲಾಗುವುದಿಲ್ಲವೋ ಆ ಯಾವುದೇ ಕೆಲಸದಲ್ಲಿ ನಿರತರಾದ ನಿಯೋಜಿತರು.

(3) ಉಪಪ್ರಕರಣ (2)ರ ಖಂಡ (ಸಿ)ಯ ಉದ್ದೇಶಗಳಿಗಾಗಿ, ನಿಯೋಜಿತನ ನಿಯೋಜನೆಯು ಪ್ರತಿ ದಿವಸದ ಕೆಲಸದ ವೇಳೆಗಳು ಅಥವಾ ಆ ನಿಯೋಜಿತನಿಗಾಗಿ ಪ್ರತಿ ದಿವಸದ ಅಂಥ ಕೆಲಸದ ವೇಳೆಗಳು ಇಲ್ಲದಿದ್ದರೆ, ಕೆಲಸದ ವೇಳೆಗಳು ಕೆಲಸದ ಮೇಲಿರಬಹುದಾದಂತೆ ನಿಯೋಜಿತರ ಕೆಲಸವಿಲ್ಲದ ಆವಧಿಗಳನ್ನು ಸಾಮಾನ್ಯವಾಗಿ ಒಳಗೊಳ್ಳುವ ಆದರೆ ದೈಹಿಕ ಚಟುವಟಿಕೆಯನ್ನಾಗಲಿ ಅಥವಾ ಸತತ ಗಮನವನ್ನಾಗಲಿ ತೋರಿಸಲು ಕೋರದೆ ಇರುವ ಆಧಾರದ ಮೇಲೆ ಸಮುಚಿತ ಸರ್ಕಾರವು ಅಥವಾ ಈ ಬಗ್ಗೆ ರಾಜ್ಯ ಸರ್ಕಾರವು ವಿಶೇಷವಾಗಿ ಅಧಿಕೃತಗೊಳಿಸಿದ ಕಾರ್ಮಿಕ ಡೆಪ್ಯುಟಿ

ಕಮಿಷನರನ ದರ್ಜೆಗೆ ಕಡಿಮೆಯಿಲ್ಲದ ಅಧಿಕಾರಿಯು ಹಾಗೆಂಬುದಾಗಿ ಘೋಷಿಸಿದಾಗ ಹೆಚ್ಚಾಗಿ ಬಿಟ್ಟು ಬಿಟ್ಟು ಬರುವುದಾಗಿರುತ್ತದೆ.

**14. ಅಧಿಕಕಾಲಿಕ (ಓವರ್‌ಟೈಂ).–** (1) ಯಾವ ನಿಯೋಜಿತನ ಮಜೂರಿಗಳ ಕನಿಷ್ಠ ದರವನ್ನು ಈ ಅಧಿನಿಯಮದ ಮೇರೆಗೆ ಗಂಟೆಗೆ ಅನುಸಾರವಾಗಿ ದಿವಸಕ್ಕೆ ಅನುಸಾರವಾಗಿ ನಿಗದಿಪಡಿಸಲಾಗಿದೆಯೋ ಆ ನಿಯೋಜಿತನು ಒಂದು ಸಾಮಾನ್ಯ ಕೆಲಸದ ದಿವಸವನ್ನು ಆಗಿಸುವ ಗಂಟೆಗಳ ಸಂಖ್ಯೆಗಿಂತ ಹೆಚ್ಚಿಗೆ ಯಾವುದೇ ದಿವಸದಂದು ಕೆಲಸ ಮಾಡಿದರೆ, ನಿಯೋಜಕನು ಹೆಚ್ಚಿಗೆಯಾಗಿ ಹಾಗೆ ಕೆಲಸ ಮಾಡಿದ ಪ್ರತಿಯೊಂದು ಗಂಟೆಗಾಗಿ ಅಥವಾ ಗಂಟೆಯ ಭಾಗಕ್ಕಾಗಿ ಈ ಅಧಿನಿಯಮದ ಮೇರೆಗೆ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಸಮುಚಿತ ಸರ್ಕಾರದ ಯಾವುದೇ ಕಾನೂನಿನ ಮೇರೆಗೆ ನಿಗದಿಪಡಿಸಿದ ಅಧಿಕಕಾಲಿಕ ದರಗಳಲ್ಲಿ ಹೆಚ್ಚಿನದನ್ನು ಅವನಿಗೆ ಸಂದಾಯ ಮಾಡತಕ್ಕದ್ದು.

(2) ಈ ಅಧಿನಿಯಮದಲ್ಲಿರುವುದಾವುದೂ ಕಾರ್ಖಾನೆಗಳ ಅಧಿನಿಯಮ, 1948 (1948ರ 63)ರ ಪ್ರಕರಣ 59ರ ಪ್ರವರ್ತನೆಗೆ, ಆ ಉಪಬಂಧಗಳು ಅನ್ವಯವಾಗುವ ಯಾವುದೇ ಸಂದರ್ಭದಲ್ಲಿ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

**15. ಸಾಮಾನ್ಯ ಕೆಲಸದ ದಿವಸಕ್ಕಿಂತ ಕಡಿಮೆ ಕೆಲಸ ಮಾಡುವ ಕೆಲಸಗಾರನ ಮಜೂರಿಗಳು.–** ಈ ಅಧಿನಿಯಮದ ಮೇರೆಗೆ, ದಿವಸಕ್ಕೆ ಅನುಸಾರವಾಗಿ ಮಜೂರಿಗಳ ಕನಿಷ್ಠ ದರವನ್ನು ನಿಗದಿಪಡಿಸಲಾಗಿರುವ ನಿಯೋಜಿತನನ್ನು ಯಾವ ದಿವಸದಂದು ಸಾಮಾನ್ಯ ಕೆಲಸದ ದಿವಸವನ್ನಾಗಿಸುವ ಗಂಟೆಗಳ ಅಗತ್ಯ ಸಂಖ್ಯೆಗಿಂತ ಕಡಿಮೆ ಅವಧಿಗಾಗಿ ನಿಯೋಜಿತನಾಗಿರುವನೋ ಆ ಯಾವುದೇ ದಿವಸದಂದು ಅವನು ಕೆಲಸ ಮಾಡಿದರೆ, ಇಲ್ಲಿ ಇನ್ನು ಮುಂದೆ ಅನ್ಯಥಾ ಉಪಬಂಧಿಸಿದಂತೆ ಹೊರತು, ಆ ದಿವಸ ಅವನು ಮಾಡಿದ ಕೆಲಸಕ್ಕೆ ಸಂಬಂಧಿಸಿದಂತೆ ಇಡೀ ಸಾಮಾನ್ಯ ಕೆಲಸದ ದಿವಸಕ್ಕಾಗಿ ಅವನು ಕೆಲಸವನ್ನು ಮಾಡಿದ್ದಿದ್ದರೆ ಹೇಗೋ ಹಾಗೆ ಮಜೂರಿಗಳನ್ನು ಸ್ವೀಕರಿಸಲು ಹಕ್ಕುಳ್ಳವನಾಗಿರತಕ್ಕದ್ದು:

ಪರಂತು, ಆದಾಗ್ಯೂ,–

(i) ಕೆಲಸ ಮಾಡಲು ಅವನು ತಪ್ಪುವುದು, ಕೆಲಸ ಮಾಡಲು ಅವನಿಗೆ ಇಷ್ಟವಿಲ್ಲದಿರುವುದರಿಂದಾಗಿ ಮತ್ತು ನಿಯೋಜಕನು ಅವನಿಗೆ ಕೆಲಸವನ್ನು ಒದಗಿಸಲು ಲೋಪಿಸದೆ ಇರುವುದರಿಂದಾಗಿ ಉಂಟಾಗಿರುವ ಯಾವುದೇ ಸಂದರ್ಭದಲ್ಲಿ; ಮತ್ತು

(ii) ನಿಯಮಿಸಬಹುದಾದಂಥ ಇತರ ಪ್ರಕರಣಗಳಲ್ಲಿ ಮತ್ತು ಸಂದರ್ಭಗಳಲ್ಲಿ, ಅವನು ಸಾಮಾನ್ಯ ಕೆಲಸದ ಇಡೀ ದಿವಸಕ್ಕಾಗಿ ಮಜೂರಿಗಳನ್ನು ಸ್ವೀಕರಿಸಲು ಹಕ್ಕುಳ್ಳವನಾಗಿರತಕ್ಕದ್ದಲ್ಲ.

**16. ಎರಡು ಅಥವಾ ಅದಕ್ಕಿಂತ ಹೆಚ್ಚು ಕೆಲಸದ ವರ್ಗಗಳಿಗಾಗಿ ಮಜೂರಿ.–** ನಿಯೋಜಿತನು ಯಾವ ಎರಡು ಅಥವಾ ಅದಕ್ಕಿಂತ ಹೆಚ್ಚಿನ ಕೆಲಸದ ವರ್ಗಗಳ ಪ್ರತಿಯೊಂದಕ್ಕೂ ಬೇರೆ ಬೇರೆ ಮಜೂರಿಗಳ ಕನಿಷ್ಠ ದರವು ಅನ್ವಯವಾಗುವುದೋ ಆ ಎರಡು ಅಥವಾ ಅದಕ್ಕಿಂತ ಹೆಚ್ಚು ವರ್ಗಗಳ ಕೆಲಸವನ್ನು ಮಾಡುವಲ್ಲಿ, ನಿಯೋಜಕನು ಅಂಥ ನಿಯೋಜಿತನಿಗೆ ಪ್ರತಿಯೊಂದು ಅಂಥ ಕೆಲಸದ ವರ್ಗದಲ್ಲಿ ಅನುಕ್ರಮವಾಗಿ ಹಿಡಿದ ಕಾಲಕ್ಕೆ ಸಂಬಂಧಿಸಿದಂತೆ ಪ್ರತಿಯೊಂದು ಅಂಥ ವರ್ಗಕ್ಕೆ ಸಂಬಂಧಿಸಿದಂತೆ ಜಾರಿಯಲ್ಲಿರುವ ಕನಿಷ್ಠ ದರಕ್ಕಿಂತ ಕಡಿಮೆ ಇಲ್ಲದ ಮಜೂರಿಗಳನ್ನು ಸಂದಾಯ ಮಾಡತಕ್ಕದ್ದು.

**17. ತುಂಡು ಕೆಲಸಕ್ಕಾಗಿ ಕನಿಷ್ಠ ವೇಳಾದರ ಮಜೂರಿಗಳು.–** ನಿಯೋಜಿತನು, ಯಾವ ತುಂಡು ಕೆಲಸಕ್ಕಾಗಿ ಈ ಅಧಿನಿಯಮದ ಮೇರೆಗೆ ಕನಿಷ್ಠ ತುಂಡು ದರವಲ್ಲದೆ, ಆದರೆ ಕನಿಷ್ಠ ವೇಳಾದರವನ್ನು ನಿಗದಿಪಡಿಸಲಾಗಿದೆಯೋ ಆ ತುಂಡು

ಕೆಲಸದಲ್ಲಿ ನಿಯೋಜಿತನಾಗಿರುವಲ್ಲಿ, ನಿಯೋಜಕನು ಅಂಥ ನಿಯೋಜಿತನಿಗೆ ಕನಿಷ್ಠ ವೇಳಾದರಕ್ಕಿಂತ ಕಡಿಮೆಯಲ್ಲದ ಮಜೂರಿ ದರಗಳನ್ನು ಸಂದಾಯ ಮಾಡತಕ್ಕದ್ದು.

**18. ರಿಜಿಸ್ಟರುಗಳು ಮತ್ತು ದಾಖಲೆಗಳನ್ನು ಇಟ್ಟುಕೊಂಡು ಬರುವುದು.–** (1) ಪ್ರತಿಯೊಬ್ಬ ನಿಯೋಜಕನು ನಿಯಮಿಸಬಹುದಾದಂತೆ, ಅವನು ನಿಯೋಜಿಸಿಕೊಂಡಿರುವ ನಿಯೋಜಿತರ ಅಂಥ ವಿವರಗಳು, ಅವರು ನೆರವೇರಿಸಿದ ಕೆಲಸ, ಅವರಿಗೆ ಸಂದಾಯ ಮಾಡಿದ ಮಜೂರಿಗಳು, ಅವರು ಕೊಟ್ಟ ಸ್ವೀಕೃತಿಗಳ ಮತ್ತು ಅಂಥ ಇತರ ವಿವರಗಳನ್ನು ಕೊಡುವ ರಿಜಿಸ್ಟರು ಮತ್ತು ದಾಖಲೆಗಳನ್ನು ಮತ್ತು ಅಂಥ ನಮೂನೆಯಲ್ಲಿ ಇಡತಕ್ಕದ್ದು.

(2) ಪ್ರತಿಯೊಬ್ಬ ನಿಯೋಜಕನು ನಿಯಮಿಸಬಹುದಾದಂಥ ರೀತಿಯಲ್ಲಿ ಕಾರ್ಖಾನೆ, ಕಾರ್ಯಾಗಾರ ಅಥವಾ ಅನುಸೂಚಿತ ನಿಯೋಜನೆಯಲ್ಲಿ ನಿಯೋಜಿತರನ್ನು ನಿಯೋಜಿಸಿಕೊಳ್ಳಬಹುದಾದ ಸ್ಥಳದಲ್ಲಿ ಅಥವಾ ಹೊರ ಕೆಲಸಗಾರರ ಸಂಬಂಧದಲ್ಲಿ ಅಂಥ ಕಾರ್ಖಾನೆ, ಕಾರ್ಯಾಗಾರ ಅಥವಾ ಅವರಿಗೆ ಹೊರ ಕೆಲಸವನ್ನು ಕೊಡುವುದಕ್ಕಾಗಿ ಉಪಯೋಗಿಸಬಹುದಾದ ಸ್ಥಳದಲ್ಲಿ ನಿಯಮಿಸಿದ ವಿವರಗಳನ್ನೊಳಗೊಂಡ ನಿಯಮಿಸಿದ ನಮೂನೆಯಲ್ಲಿ ನೋಟೀಸುಗಳನ್ನು ಪ್ರದರ್ಶಿಸಿ ಇಡತಕ್ಕದ್ದು.

(3) ಸಮುಚಿತ ಸರ್ಕಾರವು, ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ಯಾವ ಅನುಸೂಚಿತ ನಿಯೋಜನೆಗೆ ಸಂಬಂಧಿಸಿದಂತೆ ಮಜೂರಿಗಳ ಕನಿಷ್ಠ ದರಗಳನ್ನು ನಿಗದಿಪಡಿಸಲಾಗಿದೆಯೋ ಆ ಯಾವುದೇ ಅನುಸೂಚಿತ ನಿಯೋಜನೆಯಲ್ಲಿ ನಿಯೋಜಿತರಾದ ನಿಯೋಜಿತರಿಗೆ ಮಜೂರಿ ಪುಸ್ತಕಗಳನ್ನು ಅಥವಾ ಮಜೂರಿ ಚೀಟಿಗಳನ್ನು ಕೊಡುವುದಕ್ಕಾಗಿ ವ್ಯವಸ್ಥೆ ಮಾಡಬಹುದು ಮತ್ತು ಅಂಥ ಮಜೂರಿ ಪುಸ್ತಕವು ಅಥವಾ ಮಜೂರಿ ಚೀಟಿಗಳಲ್ಲಿ ನಿಯೋಜಕನು ಅಥವಾ ಅವನ ಏಜೆಂಟನು ನಮೂದನೆಗಳನ್ನು ಮಾಡಬೇಕಾದ ಮತ್ತು ಅಧಿಪ್ರಮಾಣಿಸಬೇಕಾದಂಥ ರೀತಿಯನ್ನು ನಿಯಮಿಸಬಹುದು.

**19. ಪರಿಶೀಲಕರು.–** (1) ಸಮುಚಿತ ಸರ್ಕಾರವು, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಈ ಅಧಿನಿಯಮದ ಉದ್ದೇಶಕ್ಕಾಗಿ ಪರಿಶೀಲಕರಾಗಿ ತಾನು ಯೋಗ್ಯವೆಂದು ಯೋಚಿಸುವಂಥ ವ್ಯಕ್ತಿಗಳನ್ನು ನೇಮಕ ಮಾಡಬಹುದು ಮತ್ತು ಅವರು ಪ್ರಕಾರ್ಯಗಳನ್ನು ಚಲಾಯಿಸತಕ್ಕ ಸ್ಥಳೀಯ ಪರಿಮಿತಿಗಳನ್ನು ನಿರ್ಧರಿಸಬಹುದು.

(2) ಈ ಬಗ್ಗೆ ರಚಿಸಿದ ಯಾವುದೇ ನಿಯಮಗಳಿಗೆ ಒಳಪಟ್ಟು ಅವನನ್ನು ನೇಮಕ ಮಾಡಿರುವಂಥ ಸ್ಥಳೀಯ ಪರಿಮಿತಿಗಳೊಳಗೆ ಪರಿಶೀಲಕನು,–

(ಎ) ಅವನು ಸೂಕ್ತವೆಂದು ಯೋಚಿಸುವಂತೆ ಸರ್ಕಾರ ಅಥವಾ ಯಾವುದೇ ಸ್ಥಳೀಯ ಅಥವಾ ಇತರ ಸಾರ್ವಜನಿಕ ಪ್ರಾಧಿಕಾರದ ಸೇವೆಯಲ್ಲಿರುವ ವ್ಯಕ್ತಿಗಳಾಗಿರುವ ಸಹಾಯಕರು (ಯಾರಾದರೂ ಇದ್ದರೆ) ಅವರೊಂದಿಗೆ ಎಲ್ಲಾ ಯುಕ್ತ ವೇಳೆಗಳಲ್ಲಿ ಈ ಅಧಿನಿಯಮ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಮೂಲಕ ಅಥವಾ ಮೇರೆಗೆ ಇಡಬೇಕೆಂದು ಅಥವಾ ಪ್ರದರ್ಶಿಸಬೇಕೆಂದು ಅಗತ್ಯಪಡಿಸಿದ ಯಾವುದೇ ರಿಜಿಸ್ಟರು, ಮಜೂರಿಗಳ ದಾಖಲೆ ಅಥವಾ ನೋಟೀಸುಗಳನ್ನು ಪರೀಕ್ಷಿಸುವ ಉದ್ದೇಶಕ್ಕಾಗಿ, ಈ ಅಧಿನಿಯಮದ ಮೇರೆಗೆ ಮಜೂರಿಗಳ ಕನಿಷ್ಠ ದರಗಳನ್ನು ನಿಗದಿಪಡಿಸಲಾಗಿರುವಂಥ ಯಾವುದೇ ಅನುಸೂಚಿತ ನಿಯೋಜನೆಯಲ್ಲಿ ನಿಯೋಜಿತರಾದ ನಿಯೋಜಿತರು ಅಥವಾ ಹೊರ ಕೆಲಸಗಾರರಿಗೆ ಕೆಲಸವನ್ನು ಕೊಟ್ಟಿರುವ ಆವರಣ ಅಥವಾ ಸ್ಥಳವನ್ನು ಪ್ರವೇಶಿಸಬಹುದು ಮತ್ತು ಪರಿಶೀಲನೆಗಾಗಿ ಅದನ್ನು ಹಾಜರುಪಡಿಸಲು ಅಗತ್ಯಪಡಿಸಬಹುದು;

(ಬಿ) ಅಂಥ ಯಾವುದೇ ಆವರಣ ಅಥವಾ ಸ್ಥಳದಲ್ಲಿ ಅವನಿಗೆ ಕಂಡುಬರುವ ಮತ್ತು ಅಲ್ಲಿ ನಿಯೋಜಿತನಾದ ನಿಯೋಜಿತನೆಂದು ಅಥವಾ ಅದರಲ್ಲಿ ಕೆಲಸವನ್ನು ಕೊಟ್ಟಿರುವ ನಿಯೋಜಿತನೆಂದು ಅವನಿಗೆ ನಂಬಲು ಯುಕ್ತ ಕಾರಣವಿರುವ ಯಾರೇ ವ್ಯಕ್ತಿಯನ್ನು ಪರೀಕ್ಷಿಸಬಹುದು;

(ಸಿ) ಯಾರಿಗೆ, ಯಾರಿಗಾಗಿ ಮತ್ತು ಯಾರಿಂದ ಕೆಲಸವನ್ನು ಕೊಡಲಾಗಿದೆಯೋ ಅಥವಾ ಸ್ವೀಕರಿಸಲಾಗಿದೆಯೋ ಆ ವ್ಯಕ್ತಿಗಳ ಹೆಸರುಗಳು ಮತ್ತು ವಿಳಾಸಗಳಿಗೆ ಸಂಬಂಧಿಸಿದಂತೆ ಮತ್ತು ಆ ಕೆಲಸಕ್ಕಾಗಿ ಮಾಡಬೇಕಾದ ಸಂದಾಯಗಳಿಗೆ ಸಂಬಂಧಿಸಿದಂತೆ ಅವನು ಕೊಡಲು ಶಕ್ತನಾಗಿರುವಂಥ ಯಾವುದೇ ಮಾಹಿತಿಯನ್ನು ಕೊಡುವ ಹೊರಗೆಲಸವನ್ನು ಕೊಡುವ ಯಾರೇ ವ್ಯಕ್ತಿಯನ್ನು ಮತ್ತು ಯಾರೇ ಹೊರ ಕೆಲಸಗಾರರನ್ನು ಅಗತ್ಯಪಡಿಸಬಹುದು;

(ಡಿ) ನಿಯೋಜಕನು ಮಾಡಿರುವನೆಂದು ಅವನು ನಂಬಲು ಕಾರಣವಿರುವಂಥ ಈ ಅಧಿನಿಯಮದ ಮೇರೆಗಿನ ಅಪರಾಧಕ್ಕೆ ಸಂಬಂಧಿಸಿದಂತೆ ಅವನು ಸುಸಂಬದ್ಧವೆಂದು ಪರ್ಯಾಲೋಚಿಸಬಹುದಾದಂಥ ರಿಜಿಸ್ಟರು, ಮಜೂರಿಗಳ ದಾಖಲೆ ಅಥವಾ ನೋಟೀಸುಗಳು ಅಥವಾ ಅದರ ಭಾಗಗಳನ್ನು ಅಭಿಗ್ರಹಿಸಬಹುದು ಅಥವಾ ಅವುಗಳ ಪ್ರತಿಗಳನ್ನು ತೆಗೆದುಕೊಳ್ಳಬಹುದು; ಮತ್ತು

(ಇ) ನಿಯಮಿಸಬಹುದಾದಂಥ ಇತರ ಅಧಿಕಾರಗಳನ್ನು ಚಲಾಯಿಸಬಹುದು.

(3) ಪ್ರತಿಯೊಬ್ಬ ಪರಿಶೀಲಕನನ್ನು ಭಾರತ ದಂಡ ಸಂಹಿತೆ (1860ರ 45)ಯ ಅರ್ಥವ್ಯಾಪ್ತಿಯೊಳಗೆ ಲೋಕ ನೌಕರನೆಂಬುದಾಗಿ ಭಾವಿಸತಕ್ಕದ್ದು.

(4) ಉಪಪ್ರಕರಣ (2)ರ ಮೇರೆಗೆ ಯಾವುದೇ ದಸ್ತಾವೇಜು ಅಥವಾ ವಸ್ತುವನ್ನು ಹಾಜರುಪಡಿಸಲು ಅಥವಾ ಯಾವುದೇ ಮಾಹಿತಿಯನ್ನು ಕೊಡಲು ಪರಿಶೀಲಕನು ಅಗತ್ಯಪಡಿಸಿದ ಯಾರೇ ವ್ಯಕ್ತಿಯು ಭಾರತ ದಂಡ ಸಂಹಿತೆ (1860ರ 45)ಯ ಪ್ರಕರಣ 175ರ ಮತ್ತು ಪ್ರಕರಣ 176ರ ಅರ್ಥವ್ಯಾಪ್ತಿಯಲ್ಲಿ ಹಾಗೆ ಮಾಡಲು ಕಾನೂನುಸಮ್ಮತವಾಗಿ ಬದ್ಧನಾಗಿರುವನೆಂಬುದಾಗಿ ಭಾವಿಸತಕ್ಕದ್ದು.

**20.ಕ್ಲೇಮುಗಳು.–** (1) ಸಮುಚಿತ ಸರ್ಕಾರವು, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಕಾರ್ಮಿಕರ ನಷ್ಟಪರಿಹಾರಕ್ಕಾಗಿ ಯಾರೇ ಕಮಿಷನರ್ ಅಥವಾ ಯಾವುದೇ ಪ್ರದೇಶಕ್ಕಾಗಿ ಕಾರ್ಮಿಕ ಕಮೀಷನರನೆಂದು ಪ್ರಕಾರ್ಯಗಳನ್ನು ಚಲಾಯಿಸುತ್ತಿರುವ ಕೇಂದ್ರ ಸರ್ಕಾರದ ಯಾರೇ ಅಧಿಕಾರಿ ಅಥವಾ ಕಾರ್ಮಿಕ ಕಮಿಷನರನ ದರ್ಜೆಗೆ ಕಡಿಮೆ ಇಲ್ಲದ ರಾಜ್ಯ ಸರ್ಕಾರದ ಯಾರೇ ಅಧಿಕಾರಿ ಅಥವಾ ಸಿವಿಲ್ ನ್ಯಾಯಾಲಯದ ನ್ಯಾಯಾಧೀಶನಾಗಿ ಅಥವಾ ವೈತನಿಕ (ಸ್ಟೈಪೆಂಡರಿ) ಮ್ಯಾಜಿಸ್ಟ್ರೇಟನಾಗಿ ಅನುಭವವನ್ನು ಹೊಂದಿರುವ ಯಾರೇ ಇತರ ಅಧಿಕಾರಿಯನ್ನು ಯಾವುದೇ ನಿರ್ದಿಷ್ಟಪಡಿಸಿದ ಪ್ರಕರಣಕ್ಕಾಗಿ ಆ ಪ್ರದೇಶದಲ್ಲಿ ನಿಯೋಜಿತರಾದ ಅಥವಾ ಸಂದಾಯವನ್ನು ಪಡೆದ ನಿಯೋಜಿತರಿಗೆ ಮಜೂರಿಗಳ ಕನಿಷ್ಠ ದರಗಳಿಗಿಂತ ಕಡಿಮೆಯಾದ ಸಂದಾಯದಿಂದ ಅಥವಾ ಪ್ರಕರಣ 13ರ ಉಪಪ್ರಕರಣ (1)ರ ಖಂಡ (ಬಿ) ಅಥವಾ ಖಂಡ (ಸಿ)ಯ ಮೇರೆಗೆ ವಿಶ್ರಾಂತಿ ದಿವಸಗಳಿಗಾಗಿ ಅಥವಾ ಅಂಥ ದಿವಸಗಳಂದು ಮಾಡಿದ ಕೆಲಸಕ್ಕಾಗಿ ಪರಿಶ್ರಮಧನದ ಅಥವಾ ಪ್ರಕರಣ 14ರ ಮೇರೆಗೆ ಅಧಿಕಕಾಲಿಕ ದರದಲ್ಲಿ ಮಜೂರಿ ಸಂದಾಯ ಮಾಡಿದುದಕ್ಕೆ ಸಂಬಂಧಿಸಿದಂತೆ ಉದ್ಭವಿಸುವ ಎಲ್ಲಾ ಕ್ಲೇಮುಗಳನ್ನು ವಿಚಾರಣೆ ಮಾಡಲು ಮತ್ತು ತೀರ್ಮಾನಿಸಲು ಪ್ರಾಧಿಕಾರಿ ಎಂಬುದಾಗಿ ನೇಮಕ ಮಾಡಬಹುದು.

(2) ಉಪಪ್ರಕರಣ (1)ರಲ್ಲಿ ಉಲ್ಲೇಖಿಸಿದ ಸ್ವರೂಪದ ಯಾವುದೇ ಕ್ಲೇಮನ್ನು ನಿಯೋಜಿತನ ಹೊಂದಿರುವಲ್ಲಿ, ಆ ನಿಯೋಜಿತನು ಖುದ್ದಾಗಿ ಅಥವಾ ಅವನ ಪರವಾಗಿ ಕಾರ್ಯನಿರ್ವಹಿಸಲು ಬರಹದಲ್ಲಿ ಅಧಿಕೃತನಾದ ಯಾರೇ

ನ್ಯಾಯವಾದಿ ಅಥವಾ ನೋಂದಾಯಿತ ಕಾರ್ಮಿಕ ಸಂಘದ ಯಾರೇ ಪರಿಶೀಲಕನು ಅಥವಾ ಉಪಪ್ರಕರಣ (1)ರ ಮೇರೆಗೆ ನೇಮಕಗೊಂಡ ಪ್ರಾಧಿಕಾರಿಯ ಅನುಮತಿಯೊಂದಿಗೆ ಕಾರ್ಯನಿರ್ವಹಿಸುತ್ತಿರುವ ಯಾರೇ ವ್ಯಕ್ತಿಯು ಉಪಪ್ರಕರಣ (3)ರ ಮೇರೆಗೆ ಒಂದು ನಿರ್ದೇಶನಕ್ಕಾಗಿ ಅಂಥ ಪ್ರಾಧಿಕಾರಿಗೆ ಅರ್ಜಿ ಸಲ್ಲಿಸಬಹುದು:

ಪರಂತು, ಅಂಥ ಪ್ರತಿಯೊಂದು ಅರ್ಜಿಯನ್ನು ಕನಿಷ್ಠ ಮಜೂರಿಗಳು ಅಥವಾ ಇತರ ಮೊಬಲಗು ಸಂದಾಯವಾಗಬೇಕಾಗಿದ್ದಂಥ ದಿನಾಂಕದಿಂದ ಆರು ತಿಂಗಳೊಳಗೆ ಸಲ್ಲಿಸತಕ್ಕದ್ದು:

ಮತ್ತೂ ಪರಂತು, ಯಾವುದೇ ಅರ್ಜಿಯನ್ನು ಸದರಿ ಆರು ತಿಂಗಳುಗಳ ಅವಧಿಯ ತರುವಾಯ ಅರ್ಜಿದಾರನು ಅಂಥ ಅವಧಿಯೊಳಗೆ ಅರ್ಜಿಯನ್ನು ಮಾಡಿಕೊಳ್ಳದೆ ಇರುವುದಕ್ಕಾಗಿ ಸಾಕಷ್ಟು ಕಾರಣವನ್ನು ಹೊಂದಿದ್ದನೆಂದು ಅವನು ಪ್ರಾಧಿಕಾರಿಗೆ ಮನದಟ್ಟು ಮಾಡಿದಾಗ ಅಂಗೀಕರಿಸಬಹುದು.

(3) ಉಪಪ್ರಕರಣ (2)ರ ಮೇರೆಗೆ ಯಾವುದೇ ಅರ್ಜಿಯನ್ನು ಪುರಸ್ಕರಿಸಿದಾಗ ಪ್ರಾಧಿಕಾರಿಯು ಅರ್ಜಿದಾರನ ಮತ್ತು ನಿಯೋಜಕನ ವಿಚಾರಣೆ ಮಾಡತಕ್ಕದ್ದು ಅಥವಾ ಅಹವಾಲನ್ನು ಹೇಳಿಕೊಳ್ಳಲು ಅವರಿಗೆ ಅವಕಾಶವನ್ನು ಕೊಡತಕ್ಕದ್ದು ಮತ್ತು ಅವನು ಅವಶ್ಯವೆಂದು ಪರ್ಯಾಲೋಚಿಸಬಹುದಾದಂಥ ಇನ್ನೂ ಹೆಚ್ಚಿನ ವಿಚಾರಣೆ ಯಾವುದಾದರೂ ಇದ್ದರೆ ಅದನ್ನು ನಡೆಸಿದ ತರುವಾಯ ಈ ಅಧಿನಿಯಮದ ಮೇರೆಗೆ ನಿಯೋಜಕನು ಗುರಿಯಾಗಬಹುದಾದಂಥ ಇತರ ದಂಡನೆಗೆ ಬಾಧಕವಾಗದಂತೆ,–

(i) ಮಜೂರಿಗಳ ಕನಿಷ್ಠ ದರಗಳಿಗಿಂತ ಕಡಿಮೆ ಸಂದಾಯದಿಂದ ಉದ್ಭವಿಸುವ ಕ್ಲೇಮಿನ ಸಂದರ್ಭದಲ್ಲಿ, ನಿಯೋಜಿತನಿಗೆ, ಅವನಿಗೆ ಸಂದಾಯವಾಗಬೇಕಾದ ಕನಿಷ್ಠ ಮಜೂರಿಗಳ ವಾಸ್ತವವಾಗಿ ಸಂದಾಯ ಮಾಡಿದ ಮೊಬಲಗನ್ನು ಮೀರಿದಂಥ ಮೊಬಲಗನ್ನು ಪ್ರಾಧಿಕಾರಿಯು ಸೂಕ್ತವೆಂದು ಯೋಚಿಸಬಹುದಾದಂಥ ಹೆಚ್ಚಿನ ಮೊಬಲಗಿನ ಹತ್ತರಷ್ಟನ್ನು ಮೀರದೆ ಇರುವ ನಷ್ಟಪರಿಹಾರ ಸಂದಾಯ ಮಾಡಲು ನಿರ್ದೇಶಿಸಬಹುದು;

(ii) ಇತರ ಯಾವುದೇ ಸಂದರ್ಭದಲ್ಲಿ, ನಿಯೋಜಿತನಿಗೆ ಬಾಕಿಯಾಗುವ ಮೊಬಲಗನ್ನು ಪ್ರಾಧಿಕಾರಿಯು ಯೋಚಿಸಬಹುದಾದಂಥ ಹತ್ತು ರೂಪಾಯಿಗಳನ್ನು ಮೀರದೆ ಇರುವ ನಷ್ಟಪರಿಹಾರದ ಸಂದಾಯದೊಂದಿಗೆ ಸಂದಾಯ ಮಾಡಲು ನಿರ್ದೇಶಿಸಬಹುದು

– ಮತ್ತು ಅಂಥ ನಷ್ಟಪರಿಹಾರದ ಸಂದಾಯವನ್ನು ಪ್ರಾಧಿಕಾರಿಯು, ಅರ್ಜಿಯನ್ನು ವಿಲೆ ಮಾಡುವುದಕ್ಕೆ ಮುಂಚೆ ನಿಯೋಜಿತನಿಗೆ ನಿಯೋಜಕನು ಹೆಚ್ಚಿನದನ್ನು ಅಥವಾ ಬಾಕಿಯಾದ ಮೊಬಲಗನ್ನು ಸಂದಾಯ ಮಾಡಿರುವ ಸಂದರ್ಭಗಳಲ್ಲಿ ಸಂದಾಯ ಮಾಡುವಂತೆ ನಿರ್ದೇಶಿಸಬಹುದು.

(4) ಈ ಪ್ರಕರಣದ ಮೇರೆಗೆ ಯಾವುದೇ ಅರ್ಜಿಯನ್ನು ವಿಚಾರಣೆ ಮಾಡುವ ಪ್ರಾಧಿಕಾರಿಯು ಅದು ದ್ವೇಷಪೂರ್ವಕ ಅಥವಾ ಕಿರುಕುಳಕಾರಿಯಾಗಿತ್ತೆಂದು ಮನದಟ್ಟು ಮಾಡಿಕೊಂಡರೆ ಅವನು ಐವತ್ತು ರೂಪಾಯಿಗಳಿಗೆ ಮೀರದ ದಂಡವನ್ನು ನಿಯೋಜಕನಿಗೆ ಅರ್ಜಿಯನ್ನು ಸಲ್ಲಿಸಿರುವ ವ್ಯಕ್ತಿಯು ಸಂದಾಯ ಮಾಡತಕ್ಕದ್ದೆಂದು ನಿರ್ದೇಶಿಸಬಹುದು.

(5) ಈ ಪ್ರಕರಣದ ಮೇರೆಗೆ ಸಂದಾಯ ಮಾಡಲು ನಿರ್ದೇಶಿಸಿದ ಯಾವುದೇ ಮೊಬಲಗನ್ನು,–

(ಎ) ಪ್ರಾಧಿಕಾರಿಯು ಮ್ಯಾಜಿಸ್ಟ್ರೇಟನಾಗಿದ್ದರೆ ಆ ಪ್ರಾಧಿಕಾರಿಯು, ಮ್ಯಾಜಿಸ್ಟ್ರೇಟನಾಗಿ ಆ ಪ್ರಾಧಿಕಾರಿಯು ವಿಧಿಸಿದ ಜುಲ್ಮಾನೆಯಾಗಿದ್ದಿದ್ದರೆ ಹೇಗೋ ಹಾಗೆ; ಅಥವಾ

(ಬಿ) ಆ ಪ್ರಾಧಿಕಾರಿಯು ಮ್ಯಾಜಿಸ್ಟ್ರೇಟನಾಗಿಲ್ಲದಿದ್ದರೆ, ಯಾವ ಮ್ಯಾಜಿಸ್ಟ್ರೇಟನಿಗೆ ಆ ಪ್ರಾಧಿಕಾರಿಯು ಈ ಬಗ್ಗೆ ಅರ್ಜಿಯನ್ನು ಮಾಡಿಕೊಳ್ಳಬಹುದೋ ಆ ಯಾರೇ ಮ್ಯಾಜಿಸ್ಟ್ರೇಟನು, ಅಂಥ ಮ್ಯಾಜಿಸ್ಟ್ರೇಟನು ವಿಧಿಸಿದ ಜುಲ್ಮಾನೆಯಾಗಿದ್ದಿದ್ದರೆ ಹೇಗೋ ಹಾಗೆ

– ವಸೂಲು ಮಾಡಬಹುದು.

(6) ಈ ಪ್ರಕರಣದ ಮೇರೆಗಿನ ಆ ಪ್ರಾಧಿಕಾರಿಯ ಪ್ರತಿಯೊಂದು ನಿರ್ದೇಶನವು ಅಂತಿಮವಾಗಿರತಕ್ಕದ್ದು.

(7) ಉಪಪ್ರಕರಣ (1)ರ ಮೇರೆಗೆ ನೇಮಕಗೊಂಡ ಪ್ರತಿಯೊಬ್ಬ ಪ್ರಾಧಿಕಾರಿಯು ಸಾಕ್ಷ್ಯವನ್ನು ತೆಗೆದುಕೊಳ್ಳುವ ಮತ್ತು ಸಾಕ್ಷಿದಾರರ ಹಾಜರಾತಿಯನ್ನು ಒತ್ತಾಯಿಸುವ ಮತ್ತು ದಸ್ತಾವೇಜುಗಳನ್ನು ಹಾಜರುಪಡಿಸಲು ಒತ್ತಾಯಿಸುವ ಉದ್ದೇಶಕ್ಕಾಗಿ ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ 5)ರ ಮೇರೆಗೆ ಸಿವಿಲ್ ನ್ಯಾಯಾಲಯದ ಎಲ್ಲಾ ಅಧಿಕಾರಗಳನ್ನು ಹೊಂದಿರತಕ್ಕದ್ದು ಮತ್ತು ಅಂಥ ಪ್ರತಿಯೊಬ್ಬ ಪ್ರಾಧಿಕಾರಿಯನ್ನು ದಂಡ ಪ್ರಕ್ರಿಯಾ ಸಂಹಿತೆ, 1898 (1898ರ 5)ರ ಪ್ರಕರಣ 195ರ ಮತ್ತು XXXVನೇ ಅಧ್ಯಾಯದ ಎಲ್ಲಾ ಉದ್ದೇಶಗಳಿಗಾಗಿ ಸಿವಿಲ್ ನ್ಯಾಯಾಲಯವೆಂಬುದಾಗಿ ಭಾವಿಸತಕ್ಕದ್ದು.

**ರಾಜ್ಯ ತಿದ್ದುಪಡಿಗಳು**

**ಕರ್ನಾಟಕ**

**ಪ್ರಕರಣ 20ರ ತಿದ್ದುಪಡಿ.–** ಕನಿಷ್ಠ ಮಜೂರಿ ಅಧಿನಿಯಮ, 1948 (1948ರ ಕೇಂದ್ರ ಅಧಿನಿಯಮ XI) (ಇದರಲ್ಲಿ ಇನ್ನೂ ಮುಂದೆ ಇದನ್ನು ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ)ರ ಪ್ರಕರಣ 20ರಲ್ಲಿ,–

i) ಉಪಪ್ರಕರಣ (1)ರಲ್ಲಿ, "ಕಾರ್ಮಿಕ ಆಯುಕ್ತರು ದರ್ಜೆಗಿಂತ ಕಡಿಮೆಯಲ್ಲದ" ಎಂಬ ಪದಗಳ ಬದಲಾಗಿ "ಸಹಾಯಕ ಕಾರ್ಮಿಕ ಆಯುಕ್ತರು ದರ್ಜೆಗಿಂತ ಕಡಿಮೆಯಲ್ಲದ" ಎಂಬ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು.

ii) ಉಪಪ್ರಕರಣ (4)ರಲ್ಲಿ, "ಐವತ್ತು ರೂಪಾಯಿಗಳು" ಎಂಬ ಪದಗಳ ಬದಲಾಗಿ "ಒಂದು ಸಾವಿರ ರೂಪಾಯಿಗಳು" ಎಂಬ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು.

[2017 ರ ಕರ್ನಾಟಕ ಅಧಿನಿಯಮ ಸಂಖ್ಯೆ 40ರ ಪ್ರಕರಣ 2 ಅನ್ನು ನೋಡಿ]

**ಕರ್ನಾಟಕ**

ಪ್ರಕರಣ 20ರ ಉಪಪ್ರಕರಣ (1)ರಲ್ಲಿ "ಸ್ಟೈಪೆಂಡರಿ ಮ್ಯಾಜಿಸ್ಟ್ರೇಟ್" ಎಂಬ ಪದಗಳ ಬದಲಾಗಿ "ಜ್ಯೂಡಿಷಿಯಲ್ ಮ್ಯಾಜಿಸ್ಟ್ರೇಟ್" ಎಂಬ ಪದವನ್ನು ಪ್ರತ್ಯಾಯೋಜಿಸತಕ್ಕದ್ದು.

[1965 ರ ಕರ್ನಾಟಕ ಅಧಿನಿಯಮ ಸಂಖ್ಯೆ 13ರ ಪ್ರಕರಣ 67 ಮತ್ತು ಅನುಸೂಚಿಯನ್ನು ನೋಡಿ.]

**21. ಹಲವಾರು ನಿಯೋಜಿತರಿಗೆ ಸಂಬಂಧಿಸಿದಂತೆ ಒಂದೇ ಅರ್ಜಿ.–** (1) ನಿಯಮಿಸಬಹುದಾದಂಥ ನಿಯಮಗಳಿಗೆ ಒಳಪಟ್ಟು, ಯಾವ ಅನುಸೂಚಿತ ನಿಯೋಜನೆಗೆ ಸಂಬಂಧಿಸಿದಂತೆ ಮಜೂರಿಗಳ ಕನಿಷ್ಠ ದರಗಳನ್ನು ನಿಗದಿಪಡಿಸಲಾಗಿದೆಯೋ ಆ ಅನುಸೂಚಿತ ನಿಯೋಜನೆಯಲ್ಲಿ ನಿಯೋಜಿತರಾದ ಯಾವುದೇ ಸಂಖ್ಯೆಯ ನಿಯೋಜಿತರ ಪರವಾಗಿ ಅಥವಾ ಅವರಿಗೆ ಸಂಬಂಧಿಸಿದಂತೆ ಪ್ರಕರಣ 20ರ ಮೇರೆಗೆ ಒಂದೇ ಅರ್ಜಿಯನ್ನು ಸಲ್ಲಿಸಬಹುದು ಮತ್ತು ಅಂಥ ಪ್ರಕರಣಗಳಲ್ಲಿ ಪ್ರಕರಣ 20ರ ಉಪಪ್ರಕರಣ (3)ರ ಮೇರೆಗೆ ಕೊಡಬಹುದಾದಂಥ ಗರಿಷ್ಠ ನಷ್ಟಪರಿಹಾರವು

ಸಂದರ್ಭಾನುಸಾರ ಅಂಥ ಹೆಚ್ಚಳದ ಒಟ್ಟು ಮೊಬಲಗಿನ ಹತ್ತರಷ್ಟನ್ನು ಅಥವಾ ತಲಾ ಹತ್ತು ರೂಪಾಯಿಗಳನ್ನು ಮೀರತಕ್ಕದ್ದಲ್ಲ.

(2) ಪ್ರಾಧಿಕಾರಿಯು, ಯಾವ ಅನುಸೂಚಿತ ನಿಯೋಜನೆಗೆ ಸಂಬಂಧಿಸಿದಂತೆ ಮಜೂರಿಗಳ ಕನಿಷ್ಠ ದರಗಳನ್ನು ನಿಗದಿಪಡಿಸಲಾಗಿದೆಯೋ ಆ ಅನುಸೂಚಿತ ನಿಯೋಜನೆಯಲ್ಲಿನ ನಿಯೋಜಿತರಿಗೆ ಸಂಬಂಧಿಸಿದಂತೆ ಪ್ರಕರಣ 20ರ ಮೇರೆಗೆ ಸಲ್ಲಿಸಿದ ಯಾವುದೇ ಸಂಖ್ಯೆಯ ಇತ್ಯರ್ಥದಲ್ಲಿರುವ ಪ್ರತ್ಯೇಕ ಅರ್ಜಿಗಳನ್ನು ಈ ಪ್ರಕರಣದ ಉಪಪ್ರಕರಣ (1)ರ ಮೇರೆಗೆ ಸಲ್ಲಿಸಿದ ಒಂದೇ ಅರ್ಜಿ ಎಂಬಂತೆ ವ್ಯವಹರಿಸಬಹುದು ಮತ್ತು ಆ ಉಪಪ್ರಕರಣದ ಉಪಬಂಧಗಳು ತದನುಸಾರ ಅನ್ವಯವಾಗತಕ್ಕದ್ದು.

**22. ಕೆಲವು ಅಪರಾಧಗಳಿಗೆ ದಂಡನೆಗಳು.–** (ಎ) ಈ ಅಧಿನಿಯಮದ ಉಪಬಂಧಗಳ ಮೇರೆಗೆ ಯಾರೇ ನಿಯೋಜಿತನಿಗೆ ಬಾಕಿಯಾಗುವ ಮೊಬಲಗಿಗಿಂತ ಕಡಿಮೆಯಾದ ಆ ನಿಯೋಜಿತನ ವರ್ಗ ಅಥವಾ ಕೆಲಸಕ್ಕಾಗಿ ನಿಗದಿಪಡಿಸಿದ ಮಜೂರಿಗಳ ಕನಿಷ್ಠ ದರಗಳಿಗಿಂತ ಕಡಿಮೆಯಾದುದನ್ನು ಅವನಿಗೆ ಸಂದಾಯ ಮಾಡುವ; ಅಥವಾ

(ಬಿ) ಪ್ರಕರಣ 13ರ ಮೇರೆಗೆ ಮಾಡಿದ ಯಾವುದೇ ನಿಯಮ ಅಥವಾ ಆದೇಶವನ್ನು ಉಲ್ಲಂಘಿಸುವ

- ಯಾರೇ ನಿಯೋಜಕನು ಆರು ತಿಂಗಳುಗಳಿಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಅಥವಾ ಐದುನೂರು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು:

ಪರಂತು ಈ ಪ್ರಕರಣದ ಮೇರೆಗೆ ಒಂದು ಅಪರಾಧಕ್ಕಾಗಿ ಯಾವುದೇ ಜುಲ್ಮಾನೆಯನ್ನು ವಿಧಿಸುವಲ್ಲಿ, ನ್ಯಾಯಾಲಯವು, ಪ್ರಕರಣ 20ರ ಮೇರೆಗೆ ಕೈಗೊಂಡ ಯಾವುದೇ ನಷ್ಟಪರಿಹಾರದ ಮೊಬಲಗನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳತಕ್ಕದ್ದು.

**ರಾಜ್ಯ ತಿದ್ದುಪಡಿಗಳು**

**ಕರ್ನಾಟಕ**

**ಪ್ರಕರಣ 22ರ ತಿದ್ದುಪಡಿ.–** ಮೂಲ ಅಧಿನಿಯಮದ ಪ್ರಕರಣ 22ರಲ್ಲಿ "ಐದು ನೂರು ರೂಪಾಯಿಗಳವರೆಗೂ ವಿಸ್ತರಿಸಬಹುದಾದಂಥ" ಎಂಬ ಪದಗಳ ಬದಲಾಗಿ "ಐದು ಸಾವಿರ ರೂಪಾಯಿಗಳಿಗಿಂತ ಕಡಿಮೆ ಇಲ್ಲದ ಆದರೆ ಹತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ" ಎಂಬ ಪದಗಳನ್ನು ಪ್ರತ್ಯಾಯೋಜಿತಕ್ಕದ್ದು.

[2017ರ ಕರ್ನಾಟಕ ಅಧಿನಿಯಮ ಸಂಖ್ಯೆ 40 ಪ್ರಕರಣ 3 ಅನ್ನು ನೋಡಿ]

**22ಎ. ಇತರ ಅಪರಾಧಗಳ ಬಗ್ಗೆ ದಂಡನೆಗಾಗಿ ಸಾಮಾನ್ಯ ಉಪಬಂಧ.–** ಈ ಅಧಿನಿಯಮದ ಅಥವಾ ಅದರ ಮೇರೆಗೆ ಮಾಡಿದ ಯಾವುದೇ ನಿಯಮ ಅಥವಾ ಆದೇಶ ಯಾವುದೇ ಉಪಬಂಧವನ್ನು ಉಲ್ಲಂಘಿಸುವ ಯಾರೇ ನಿಯೋಜಕನು, ಈ ಅಧಿನಿಯವದ ಮೂಲಕ ಅಂಥ ಉಲ್ಲಂಘನೆಗೆ ಯಾವುದೇ ಇತರ ದಂಡನೆಯನ್ನು ಉಪಬಂಧಿಸದಿದ್ದರೆ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

**ರಾಜ್ಯ ತಿದ್ದುಪಡಿಗಳು**

**ಕರ್ನಾಟಕ**

**ಪ್ರಕರಣ 22ಎ ನ ತಿದ್ದುಪಡಿ.–** ಮೂಲ ಅಧಿನಿಯಮದ ಪ್ರಕರಣ 22ಎ ನಲ್ಲಿ, "ಐದು ನೂರು ರೂಪಾಯಿಗಳು" ಎಂಬ ಪದಗಳ ಬದಲಾಗಿ "ಹತ್ತು ಸಾವಿರ ರೂಪಾಯಿಗಳು" ಎಂಬ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು.

[2017ರ ಕರ್ನಾಟಕ ಅಧಿನಿಯಮ 40ರ ಪ್ರಕರಣ 4ನ್ನು ನೋಡಿ]

**22ಬಿ. ಅಪರಾಧಗಳ ಸಂಜ್ಞೇಯತೆ.–** (1) ಯಾವುದೇ ನ್ಯಾಯಾಲಯವು, ಯಾರೇ ವ್ಯಕ್ತಿಯ ವಿರುದ್ಧ,–

(ಎ) ಪ್ರಕರಣ 22ರ ಖಂಡ (ಎ)ಯ ಮೇರೆಗಿನ ಅಪರಾಧಕ್ಕಾಗಿ ಅಂಥ ಅಪರಾಧವನ್ನಾಗಿಸುವ ಸಂಗತಿಗಳಿಗೆ ಸಂಬಂಧಿಸಿದಂತೆ ಅರ್ಜಿಯನ್ನು ಪ್ರಕರಣ 20ರ ಮೇರೆಗೆ ಸಲ್ಲಿಸಿದ್ದು ಮತ್ತು ಅದನ್ನು ಪೂರ್ಣವಾಗಿ ಅಥವಾ ಭಾಗಶಃ ಮಂಜೂರು ಮಾಡಿದ್ದು ಮತ್ತು ಸಮುಚಿತ ಸರ್ಕಾರವು ಅಥವಾ ಈ ಬಗ್ಗೆ ಅದರ ಅಧಿಕೃತಗೊಳಿಸಿದ ಅಧಿಕಾರಿಯು ಫಿರ್ಯಾದನ್ನು ಮಾಡಲು ಮಂಜೂರಾತಿಯನ್ನು ಕೊಟ್ಟಿದ್ದ ಹೊರತು;

(ಬಿ) ಪ್ರಕರಣ 22ರ ಖಂಡ (ಬಿ)ಯ ಮೇರೆಗಿನ ಅಥವಾ ಪ್ರಕರಣ 22ಎ ನ ಮೇರೆಗಿನ ಅಪರಾಧಕ್ಕಾಗಿ ಪರಿಶೀಲಕನು ಸಲ್ಲಿಸಿದ ಅಥವಾ ಅವನ ಮಂಜೂರಾತಿಯೊಂದಿಗೆ ಸಲ್ಲಿಸಿದ ಫಿರ್ಯಾದಿನ ಮೇಲಲ್ಲದೆ

– ಫಿರ್ಯಾದನ್ನು ಸಂಜ್ಞೇಯಕ್ಕೆ ತೆಗೆದುಕೊಳ್ಳತಕ್ಕದ್ದಲ್ಲ.

(2) ಯಾವುದೇ ನ್ಯಾಯಾಲಯವು,–

(ಎ) ಪ್ರಕರಣ 22ರ ಖಂಡ (ಎ) ಅಥವಾ ಖಂಡದ (ಬಿ)ಯ ಮೇರೆಗಿನ ಅಪರಾಧವನ್ನು ಈ ಪ್ರಕರಣದ ಮೇರೆಗೆ ಮಂಜೂರಾತಿಯನ್ನು ಕೊಟ್ಟ ಒಂದು ತಿಂಗಳೊಳಗಾಗಿ ಅದರ ಬಗ್ಗೆ ಫಿರ್ಯಾದನ್ನು ಸಲ್ಲಿಸಿದ ಹೊರತು;

(ಬಿ) ಪ್ರಕರಣ 22ಎ ನ ಮೇರೆಗಿನ ಅಪರಾಧವನ್ನು ಮಾಡಿರುವುದಾಗಿ ಆರೋಪಿಸಿದಂಥ ದಿನಾಂಕದಿಂದ ಆರು ತಿಂಗಳೊಳಗೆ ಅದರ ಬಗ್ಗೆ ಫಿರ್ಯಾದನ್ನು ಸಲ್ಲಿಸಿದ ಹೊರತು

- ಸಂಜ್ಞೇಯಕ್ಕೆ ತೆಗೆದುಕೊಳ್ಳತಕ್ಕದ್ದಲ್ಲ.

**22ಸಿ. ಕಂಪನಿಗಳಿಂದ ಅಪರಾಧಗಳು.–** (1) ಈ ಅಧಿನಿಯಮದ ಮೇರೆಗೆ ಅಪರಾಧವನ್ನು ಮಾಡುವ ವ್ಯಕ್ತಿಯ ಕಂಪನಿಯಾಗಿದ್ದರೆ, ಆ ಅಪರಾಧವನ್ನು ಮಾಡಿದ ಕಾಲದಲ್ಲಿ ಕಂಪನಿಯ ಪ್ರಭಾರದಲ್ಲಿದ್ದ ಮತ್ತು ಆ ಕಂಪನಿಯ ವ್ಯವಹಾರವನ್ನು ನಡೆಸುವ ಬಗ್ಗೆ ಕಂಪನಿಗೆ ಹೊಣೆಗಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನು ಹಾಗೂ ಆ ಕಂಪನಿಯನ್ನು ಅಪರಾಧದ ಬಗ್ಗೆ ತಪ್ಪಿತಸ್ಥರೆಂದು ಭಾವಿಸತಕ್ಕದ್ದು ಮತ್ತು ತದನುಸಾರವಾಗಿ ಕ್ರಮಕ್ಕೆ ಮತ್ತು ದಂಡನೆಗೆ ಅವರು ಗುರಿಯಾಗತಕ್ಕದ್ದು:

ಪರಂತು, ಈ ಉಪಪ್ರಕರಣದಲ್ಲಿ ಅಡಕವಾಗಿರುವುದು ಯಾವುದೂ, ಆ ಅಪರಾಧವು ಅವನಿಗೆ ತಿಳಿಯದೆಯೇ ನಡೆಯಿತೆಂದು ಅಥವಾ ಅಂಥ ಅಪರಾಧ ನಡೆಯುವುದನ್ನು ತಡೆಗಟ್ಟಲು ಅವನು ಎಲ್ಲಾ ಯುಕ್ತ ಜಾಗರೂಕತೆಯನ್ನು ವಹಿಸಿದ್ದನೆಂದು ಅವನು ರುಜುವಾತುಪಡಿಸಿದರೆ, ಈ ಅಧಿನಿಯಮದಲ್ಲಿ ಉಪಬಂಧಿಸಿದ ಯಾವುದೇ ದಂಡನೆಗೆ ಯಾರೇ ಅಂಥ ವ್ಯಕ್ತಿಯನ್ನು ಗುರಿಪಡಿಸತಕ್ಕದ್ದಲ್ಲ.

(2) ಉಪಪ್ರಕರಣ (1)ರಲ್ಲಿ ಏನೇ ಅಡಕವಾಗಿದ್ದಾಗ್ಯೂ, ಈ ಅಧಿನಿಯಮದ ಮೇರೆಗಿನ ಒಂದು ಅಪರಾಧವನ್ನು ಕಂಪನಿಯ ಮಾಡಿರುವಲ್ಲಿ ಮತ್ತು ಆ ಅಪರಾಧವು ಕಂಪನಿಯ ಯಾರೇ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ

ಇತರ ಅಧಿಕಾರಿಯ ಸಮ್ಮತಿಯಿಂದ ಇಲ್ಲವೇ ಪರೋಕ್ಷ ಸಮ್ಮತಿಯಿಂದ ನಡೆಯಿತೆಂದು ರುಜುವಾತು ಆದಲ್ಲಿ ಅಥವಾ ಅವನ ಯಾವುದೇ ನಿರ್ಲಕ್ಷತೆಯಿಂದ ನಡೆಯಿತೆಂದು ಆರೋಪಿಸಬಹುದಾಗಿರುವಲ್ಲಿ, ಕಂಪನಿಯ ಅಂಥ ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯನ್ನು ಸಹ ಆ ಅಪರಾಧದ ಬಗ್ಗೆ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ತದನುಸಾರವಾಗಿ ಕ್ರಮಕ್ಕೆ ಮತ್ತು ದಂಡನೆಗೆ ಅವರು ಗುರಿಯಾಗತಕ್ಕದ್ದು.

**ವಿವರಣೆ.–** ಈ ಪ್ರಕರಣದ ಉದ್ದೇಶಗಳಿಗಾಗಿ,–

(ಎ) 'ಕಂಪನಿ' ಎಂದರೆ, ಯಾವುದೇ ನಿಗಮಿತ ನಿಕಾಯ ಮತ್ತು ಒಂದು ಫರ್ಮನ್ನು ಅಥವಾ ವ್ಯಕ್ತಿಗಳ ಇತರ ಸಂಘವನ್ನು ಅದು ಒಳಗೊಳ್ಳುತ್ತದೆ; ಮತ್ತು

(ಬಿ) ಫರ್ಮಿನ ಸಂಬಂಧದಲ್ಲಿ 'ನಿರ್ದೇಶಕ' ಎಂದರೆ, ಆ ಫರ್ಮಿನ ಒಬ್ಬ ಪಾಲುದಾರ.

**22ಡಿ. ನಿಯೋಜಿತರಿಗೆ ಬಾಕಿಯಾಗುವ ಬಟವಾಡೆಯಾಗದ ಮೊಬಲಗುಗಳ ಸಂದಾಯ.–** ಈ ಅಧಿನಿಯಮದ ಮೇರೆಗೆ ನಿಯೋಜಿತನ ಕನಿಷ್ಠ ಮಜೂರಿಗಳ ಮೊಬಲಗಿನಂತೆ ನಿಯೋಜಿತನಿಗೆ ನಿಯೋಜಕನಿಂದ ಸಂದಾಯವಾಗಬೇಕಾದ ಅಥವಾ ಈ ಅಧಿನಿಯಮದ ಮೇರೆಗೆ ಅಥವಾ ಅದರ ಮೇರೆಗೆ ಮಾಡಲಾದ ಯಾವುದೇ ನಿಯಮ ಅಥವಾ ಆದೇಶದ ಮೇರೆಗೆ ನಿಯೋಜಿತನಿಗೆ ಅನ್ಯಥಾ ಬಾಕಿಯಾಗುವ ಎಲ್ಲಾ ಮೊಬಲಗುಗಳನ್ನು ಸಂದಾಯ ಮಾಡುವುದಕ್ಕೆ ಮುಂಚೆ ಅವನ ಮರಣ ಕಾರಣದಿಂದಾಗಿ ಅಥವಾ ಅವನು ಇರುವ ಸ್ಥಳವು ತಿಳಿದಿಲ್ಲದಿರುವ ಕಾರಣದಿಂದಾಗಿ ನಿಯೋಜಿತನಿಗೆ ಅಂಥ ಮೊಬಲಗುಗಳನ್ನು ಸಂದಾಯ ಮಾಡಲು ಆಗಿರದಿದ್ದರೆ ಅಥವಾ ಸಂದಾಯ ಮಾಡಲು ಆಗದಿದ್ದರೆ ನಿಯಮಿಸಿದ ಪ್ರಾಧಿಕಾರಿಯವರಲ್ಲಿ ಠೇವಣಿ ಇಡತಕ್ಕದ್ದು. ಅವನು ಹಾಗೆ ಠೇವಣಿ ಇಟ್ಟ ಹಣದೊಂದಿಗೆ ನಿಯಮಿಸಬಹುದಾದಂಥ ರೀತಿಯಲ್ಲಿ ವ್ಯವಹರಿಸತಕ್ಕದ್ದು.

**22ಇ. ಸರ್ಕಾರದಲ್ಲಿರುವ ನಿಯೋಜಕನ ಆಸ್ತಿಗಳ ಜಪ್ತಿಯ ವಿರುದ್ಧ ಸಂರಕ್ಷಣೆ.–** ಸಮುಚಿತ ಸರ್ಕಾರದೊಂದಿಗೆ ಕರಾರನ್ನು ಕ್ರಮಬದ್ಧವಾಗಿ ನೆರವೇರಿಸುವುದನ್ನು ಸುನಿಶ್ಚಿತಗೊಳಿಸಲು ಒಬ್ಬ ನಿಯೋಜಕನು ಆ ಸರ್ಕಾರದಲ್ಲಿ ಠೇವಣಿ ಇಟ್ಟಿರುವ ಯಾವುದೇ ಮೊಬಲಗು ಮತ್ತು ಅಂಥ ಕರಾರಿಗೆ ಸಂಬಂಧಿಸಿದಂತೆ ಸರ್ಕಾರದಿಂದ ಅಂಥ ನಿಯೋಜಕನಿಗೆ ಬಾಕಿಯಾಗುವ ಯಾವುದೇ ಇತರ ಮೊಬಲಗು ಹಿಂದೆ ಹೇಳಿದ ಕರಾರಿಗೆ ಸಂಬಂಧಿಸಿದಂತೆ ನಿಯೋಜಿತನಾದ ಯಾವುದೇ ನಿಯೋಜಿತನ ಬಗ್ಗೆ ನಿಯೋಜಕನು ವಹಿಸಿದ ಯಾವುದೇ ಋಣ ಅಥವಾ ಹೊಣೆಗಾರಿಕೆಗೆ ಸಂಬಂಧಿಸಿದಂತೆ ಯಾವುದೇ ನ್ಯಾಯಾಲಯದ ಯಾವುದೇ ಡಿಕ್ರಿ ಅಥವಾ ಆದೇಶದ ಮೇರೆಗಿನ ಜಪ್ತಿಗೆ ಗುರಿಯಾಗತಕ್ಕದ್ದಲ್ಲ.

**22ಎಫ್. ಅನುಸೂಚಿತ ನಿಯೋಜನೆಗಳಿಗೆ ಮಜೂರಿ ಸಂದಾಯ ಅಧಿನಿಯಮ, 1936ರ ಅನ್ವಯ.–** (1) ಮಜೂರಿ ಸಂದಾಯ ಅಧಿನಿಯಮ, 1936 (1936ರ 4)ರಲ್ಲಿ ಏನೇ ಅಡಕವಾಗಿದ್ದಾಗ್ಯೂ, ಸಮುಚಿತ ಸರ್ಕಾರವು, ಸರ್ಕಾರವು ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಉಪಪ್ರಕರಣ (2)ರ ಉಪಬಂಧಗಳಿಗೆ ಒಳಪಟ್ಟು, ಸದರಿ ಅಧಿನಿಯಮದ ಎಲ್ಲಾ ಅಥವಾ ಯಾವುದೇ ಉಪಬಂಧವು ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಮಾರ್ಪಾಟುಗಳು ಯಾವುವಾದರೂ ಇದ್ದರೆ ಅವುಗಳ ಸಹಿತ ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಅನುಸೂಚಿತ ನಿಯೋಜನೆಗಳಲ್ಲಿನ ನಿಯೋಜಿತರಿಗೆ ಸಂದಾಯ ಮಾಡಬೇಕಾದ ಮಜೂರಿಗಳಿಗೆ ಅನ್ವಯವಾಗತಕ್ಕದ್ದೆಂದು ನಿರ್ದೇಶಿಸಬಹುದು.

(2) ಸದರಿ ಅಧಿನಿಯಮದ ಎಲ್ಲಾ ಅಥವಾ ಯಾವುದೇ ಉಪಬಂಧವನ್ನು ಉಪಪ್ರಕರಣ (1)ರ ಮೇರೆಗೆ ಯಾವುದೇ ಅನುಸೂಚಿತ ನಿಯೋಜನೆಯಲ್ಲಿ ನಿಯೋಜಿತರಿಗೆ ಸಂದಾಯವಾಗಬೇಕಾದ ಮಜೂರಿಗಳಿಗೆ ಅನ್ವಯಿಸಿರುವಲ್ಲಿ ಈ

ಅಧಿನಿಯಮದ ಮೇರೆಗೆ ನೇಮಕಗೊಂಡ ಪರಿಶೀಲಕನನ್ನು ಅವನ ಅಧಿಕಾರವ್ಯಾಪ್ತಿಯ ಸ್ಥಳೀಯ ಪರಿಮಿತಿಗಳೊಳಗೆ ಹಾಗೆ ಅನ್ವಯಿಸಿದ ಉಪಬಂಧಗಳನ್ನು ಜಾರಿಗೊಳಿಸುವ ಉದ್ದೇಶಕ್ಕಾಗಿನ ಪರಿಶೀಲಕನೆಂಬುದಾಗಿ ಭಾವಿಸತಕ್ಕದ್ದು.

**23.ಕೆಲವು ಪ್ರಕರಣಗಳಲ್ಲಿ ಹೊಣೆಗಾರಿಕೆಯಿಂದ ನಿಯೋಜಕನಿಗೆ ವಿನಾಯಿತಿ.–** ಈ ಅಧಿನಿಯಮದ ವಿರುದ್ಧದ ಅಪರಾಧಕ್ಕಾಗಿ ನಿಯೋಜಕನ ಮೇಲೆ ಆರೋಪ ಹೊರಿಸಿರುವಲ್ಲಿ ಅವನು ಕ್ರಮಬದ್ಧವಾಗಿ ಫಿರ್ಯಾದನ್ನು ಮಾಡಿದ ಮೇಲೆ ಅವನು ಯಾವ ಇತರ ವ್ಯಕ್ತಿಯನ್ನು ವಾಸ್ತವಿಕ ಅಪರಾಧಿ ಎಂದು ಆರೋಪಿಸುವನೋ ಆ ಯಾರೇ ಇತರ ವ್ಯಕ್ತಿಯನ್ನು, ಆರೋಪವನ್ನು ವಿಚಾರಣೆ ಮಾಡುವುದಕ್ಕಾಗಿ ಗೊತ್ತುಪಡಿಸಿದ ಕಾಲದಲ್ಲಿ ನ್ಯಾಯಾಲಯದ ಮುಂದೆ ಕರೆತರಿಸಲು ಹಕ್ಕುಳ್ಳವನಾಗಿರತಕ್ಕದ್ದು ಮತ್ತು ಅಪರಾಧವನ್ನು ಮಾಡಿರುವುದನ್ನು ರುಜುವಾತುಪಡಿಸಿದ ತರುವಾಯ ನ್ಯಾಯಾಲಯಕ್ಕೆ ಮನದಟ್ಟಾಗುವಂತೆ ನಿಯೋಜಕನು,–

(ಎ) ಈ ಅಧಿನಿಯಮದ ಕಾರ್ಯಾಚರಣೆಯನ್ನು ಜಾರಿಗೊಳಿಸಲು ಅವನು ಯುಕ್ತ ಶ್ರದ್ಧೆಯನ್ನು ವಹಿಸಿದ್ದೆನೆಂದು; ಮತ್ತು

(ಬಿ) ಸದರಿ ಇತರ ವ್ಯಕ್ತಿಯು ಪ್ರಶ್ನಿತ ಅಪರಾಧವನ್ನು ಅವನ ತಿಳುವಳಿಕೆ, ಸಮ್ಮತಿ ಅಥವಾ ಪರೋಕ್ಷ ಸಮ್ಮತಿ ಇಲ್ಲದೇ ಮಾಡಲಾಯಿತೆಂದು

- ರುಜುವಾತುಪಡಿಸಿದರೆ ಆ ಇತರ ವ್ಯಕ್ತಿಯನ್ನು ಆ ಅಪರಾಧದ ಅಪರಾಧಿ ಎಂದು ನಿರ್ಣಯಿಸತಕ್ಕದ್ದು ಮತ್ತು ಅವನು ನಿಯೋಜಕನಾಗಿದ್ದಿದ್ದರೆ ಹೇಗೋ ಹಾಗೆ ಅಂಥದೇ ದಂಡನೆಗೆ ಗುರಿಯಾಗತಕ್ಕದ್ದು ಮತ್ತು ನಿಯೋಜಕನನ್ನು ವಿಮೋಚನೆಗೊಳಿಸತಕ್ಕದ್ದು:

ಪರಂತು, ಹಿಂದೆ ಹೇಳಿದಂತೆ ರುಜುವಾತುಪಡಿಸಲು ಉದ್ದೇಶಿಸುವಲ್ಲಿ ನಿಯೋಜಕನನ್ನು ಪ್ರಮಾಣದ ಮೇಲೆ ಪರೀಕ್ಷಿಸಬಹುದು ಮತ್ತು ನಿಯೋಜಕನ ಅಥವಾ ಅವನ ಸಾಕ್ಷಿದಾರನ ಸಾಕ್ಷ್ಯ ಯಾವುದಾದರೂ ಇದ್ದರೆ, ಅದು ಯಾವ ವ್ಯಕ್ತಿಯನ್ನು ನಿಯೋಜಕನು ವಾಸ್ತವಿಕ ಅಪರಾಧಿ ಎಂದು ಆರೋಪಿಸುವನೋ ಆ ವ್ಯಕ್ತಿಯಿಂದ ಅಥವಾ ಅವನ ಪರವಾಗಿ ಮತ್ತು ಪ್ರಾಸಿಕ್ಯೂಷನ್‌ನಿಂದ ಪಾಟೀ ಸವಾಲಿಗೆ ಒಳಪಟ್ಟಿರತಕ್ಕದ್ದು.

**24.ದಾವೆಗಳ ಬಗ್ಗೆ ಪ್ರತಿಷೇಧ.–** ಯಾವುದೇ ನ್ಯಾಯಾಲಯವು ಮಜೂರಿಗಳ ವಸೂಲಿಗಾಗಿ ಕ್ಲೇಮು ಮಾಡಿದ ಮೊತ್ತವು,–

(ಎ) ವಾದಿಯು ಅಥವಾ ಅವನ ಪರವಾಗಿ ಸಲ್ಲಿಸಲಾಗಿರುವಂಥ ಪ್ರಕರಣ 20ರ ಮೇರೆಗಿನ ಅರ್ಜಿಯ ವಸ್ತುವಿಷಯವಾಗುವಷ್ಟರ ಮಟ್ಟಿಗೆ; ಅಥವಾ

(ಬಿ) ವಾದಿಯ ಪರವಾಗಿ ಆ ಪ್ರಕರಣದ ಮೇರೆಗಿನ ನಿರ್ದೇಶನದ ವಸ್ತುವಿಷಯವಾಗಿದ್ದಷ್ಟರ ಮಟ್ಟಿಗೆ; ಅಥವಾ

(ಸಿ) ಆ ಪ್ರಕರಣದ ಮೇರೆಗಿನ ಯಾವುದೇ ವ್ಯವಹರಣೆಯಲ್ಲಿ ವಾದಿಗೆ ಬಾಕಿಯಾಗಿಲ್ಲವೆಂದು ನ್ಯಾಯ ನಿರ್ಣೀತವಾಗಿರುವಷ್ಟರ ಮಟ್ಟಿಗೆ; ಅಥವಾ

(ಡಿ) ಆ ಪ್ರಕರಣದ ಮೇರೆಗಿನ ಅರ್ಜಿಯ ಮೂಲಕ ವಸೂಲೀಯವಾಗಿರಬಹುದಾದಷ್ಟರ ಮಟ್ಟಿಗೆ

- ಯಾವುದೇ ದಾವೆಯನ್ನು ಪುರಸ್ಕರಿಸತಕ್ಕದ್ದಲ್ಲ.

**25.ಕರಾರು ಮೂಲಕ ವಿಮೋಚನೆ.–** ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚಿತವಾಗಿಯೇ ಆಗಲಿ ತರುವಾಯವೇ ಆಗಲಿ, ಯಾವ ಕರಾರು ಅಥವಾ ಒಪ್ಪಂದದ ಮೂಲಕ ನಿಯೋಜಿತನು ಮಜೂರಿಗಳ ಕನಿಷ್ಠ ದರಕ್ಕೆ ಅಥವಾ ಈ ಅಧಿನಿಯಮದ ಮೇರೆಗೆ ಅವನಿಗೆ ಒದಗಿ ಬರುವ ಯಾವುದೇ ವಿಶೇಷ ಹಕ್ಕು ಅಥವಾ ರಿಯಾಯಿತಿಯನ್ನು ಬಿಟ್ಟು ಕೊಡುವನೋ, ಕಡಿಮೆ ಮಾಡಿಕೊಳ್ಳುವನೋ ಆ ಯಾವುದೇ ಕರಾರು ಅಥವಾ ಒಪ್ಪಂದವು, ಈ ಅಧಿನಿಯಮದ ಮೇರೆಗೆ ನಿಗದಿಪಡಿಸಿದ ಮಜೂರಿಗಳ ಕನಿಷ್ಠ ದರವನ್ನು ಕಡಿಮೆ ಮಾಡುವುದೆಂದು ಅದು ತಾತ್ಪರ್ಯವಾಗುವಷ್ಟರ ಮಟ್ಟಿಗೆ ಅನೂರ್ಜಿತ ಮತ್ತು ಶೂನ್ಯವಾಗತಕ್ಕದ್ದು.

**26.ವಿನಾಯಿತಿಗಳು ಮತ್ತು ಅಪವಾದಗಳು.–** (1) ಸಮುಚಿತ ಸರ್ಕಾರವು, ಅದು ವಿಧಿಸಲು ಸೂಕ್ತವೆಂದು ಯೋಚಿಸಬಹುದಾದಂಥ ಷರತ್ತುಗಳು ಯಾವುವಾದರೂ ಇದ್ದರೆ ಅವುಗಳಿಗೆ ಒಳಪಟ್ಟು, ಈ ಅಧಿನಿಯಮದ ಉಪಬಂಧಗಳು ಅಸಮರ್ಥಗೊಂಡ ನಿಯೋಜಿತರಿಗೆ ಸಂದಾಯ ಮಾಡಬೇಕಾದ ಮಜೂರಿಗಳಿಗೆ ಸಂಬಂಧಪಟ್ಟಂತೆ ಅನ್ವಯವಾಗತಕ್ಕದ್ದಲ್ಲವೆಂದು ನಿರ್ದೇಶಿಸಬಹುದು.

(2) ಸಮುಚಿತ ಸರ್ಕಾರವು, ವಿಶೇಷ ಕಾರಣಗಳಿಂದಾಗಿ ಅದು ಸೂಕ್ತವೆಂದು ಯೋಚಿಸಿದರೆ, ಸರ್ಕಾರ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಅದು ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳಿಗೆ ಒಳಪಟ್ಟು ಮತ್ತು ಅಂಥ ಅವಧಿಗಾಗಿ ಈ ಅಧಿನಿಯಮದ ಉಪಬಂಧಗಳು ಅಥವಾ ಅವುಗಳಲ್ಲಿ ಯಾವುದೇ ಉಪಬಂಧವು ಯಾವುದೇ ಅನುಸೂಚಿತ ನಿಯೋಜನೆಯಲ್ಲಿ ನಿಯೋಜಿತರಾದ ಎಲ್ಲಾ ಅಥವಾ ಯಾವುದೇ ವರ್ಗಕ್ಕೆ ಅಥವಾ ಅನುಸೂಚಿತ ನಿಯೋಜನೆಯನ್ನು ನಡೆಸಲಾಗುತ್ತಿರುವ ಯಾವುದೇ ಸ್ಥಳಕ್ಕೆ ಅನ್ವಯವಾಗತಕ್ಕದ್ದಲ್ಲವೆಂದು ನಿರ್ದೇಶಿಸಬಹುದು.

(2ಎ) ಸಮುಚಿತ ಸರ್ಕಾರವು, ಸಾಮಾನ್ಯವಾಗಿ ಅನುಸೂಚಿತ ನಿಯೋಜನೆಯಲ್ಲಿನ ಅಥವಾ ಸ್ಥಳೀಯ ಪ್ರದೇಶದಲ್ಲಿನ ಅನುಸೂಚಿತ ನಿಯೋಜನೆಯಲ್ಲಿ ನಿಯೋಜಿತರಾದ ಯಾವುದೇ ವರ್ಗಕ್ಕೆ ಅಥವಾ ಅನುಸೂಚಿತ ನಿಯೋಜನೆಯಲ್ಲಿನ ಯಾವುದೇ ವ್ಯವಸ್ಥಾಪನೆ ಅಥವಾ ಯಾವುದೇ ವ್ಯವಸ್ಥಾಪನೆಯ ಭಾಗಕ್ಕೆ ಅನ್ವಯವಾಗುವ ಸೇವಾ ನಿಬಂಧನೆಗಳು ಮತ್ತು ಷರತ್ತುಗಳನ್ನು ಗಮನಿಸಿ ಈ ಬಗ್ಗೆ ನಿಯಮಿಸಬಹುದಾದಂಥ ಪರಿಮಿತಿಯನ್ನು ಮೀರುವ ಮಜೂರಿಗಳನ್ನು ಸ್ವೀಕರಿಸುತ್ತಿರುವಂಥ ಆ ವರ್ಗದ ನಿಯೋಜಿತರಿಗೆ ಸಂಬಂಧಿಸಿದಂತೆ ಅಥವಾ ಅಂಥ ವ್ಯವಸ್ಥಾಪನೆ ಅಥವಾ ಯಾವುದೇ ವ್ಯವಸ್ಥಾಪನೆಯ ವರ್ಗದ ಅಂಥ ಭಾಗದಲ್ಲಿನ ನಿಯೋಜಿತರಿಗೆ ಸಂಬಂಧಿಸಿದಂತೆ ಕನಿಷ್ಠ ಮಜೂರಿಗಳನ್ನು ನಿಗದಿಪಡಿಸುವುದು ಅವಶ್ಯವಿಲ್ಲವೆಂದು ಅದು ಅಭಿಪ್ರಾಯಪಟ್ಟರೆ, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಮತ್ತು ಅದು ವಿಧಿಸಲು ಸೂಕ್ತವೆಂದು ಯೋಚಿಸಬಹುದಾದಂಥ ಷರತ್ತುಗಳು ಯಾವುವಾದರೂ ಇದ್ದರೆ ಅವುಗಳಿಗೆ ಒಳಪಟ್ಟು, ಈ ಅಧಿನಿಯಮದ ಉಪಬಂಧಗಳು ಅಥವಾ ಅವುಗಳಲ್ಲಿ ಯಾವುದಾದರೂ ಅಂಥ ನಿಯೋಜಿತರಿಗೆ ಸಂಬಂಧಪಟ್ಟಂತೆ ಅನ್ವಯವಾಗತಕ್ಕದ್ದಲ್ಲವೆಂದು ನಿರ್ದೇಶಿಸಬಹುದು.

(3) ಈ ಅಧಿನಿಯಮದಲ್ಲಿರುವುದು ಯಾವುದೂ ನಿಯೋಜಕನೊಡನೆ ವಾಸಿಸುತ್ತಿರುವ ಮತ್ತು ಅವನ ಮೇಲೆ ಅವಲಂಬಿತನಾಗಿರುವ ಅವನ ಕುಟುಂಬದ ಸದಸ್ಯನಿಗೆ ಸಂದಾಯ ಮಾಡಬೇಕಾದ ಮಜೂರಿಗಳಿಗೆ ಅನ್ವಯವಾಗತಕ್ಕದ್ದಲ್ಲ.

ವಿವರಣೆ.– ಈ ಉಪಪ್ರಕರಣದಲ್ಲಿ ನಿಯೋಜಕನ ಕುಟುಂಬದ ಸದಸ್ಯನು ಅವನ ಅಥವಾ ಅವಳ ಹೆಂಡತಿ/ಗಂಡ ಅಥವಾ ಮಗು ಅಥವಾ ತಂದೆ/ತಾಯಿ ಅಥವಾ ಸಹೋದರ ಅಥವಾ ಸಹೋದರಿಯನ್ನು ಒಳಗೊಳ್ಳುವುದಾಗಿ ಭಾವಿಸತಕ್ಕದ್ದು.

**27. ಅನುಸೂಚಿಗೆ ಸೇರಿಸಲು ರಾಜ್ಯ ಸರ್ಕಾರದ ಅಧಿಕಾರ.–** ಸಮುಚಿತ ಸರ್ಕಾರವು, ಹಾಗೆ ಮಾಡಲು ಅದರ ಉದ್ದೇಶದ ಬಗ್ಗೆ ಮೂರು ತಿಂಗಳುಗಳಿಗಿಂತ ಕಡಿಮೆಯಿಲ್ಲದ ನೋಟೀಸನ್ನು ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಕೊಟ್ಟ ತರುವಾಯ ಅಂಥದೇ ಅಧಿಸೂಚನೆಯ ಮೂಲಕ ಈ ಅಧಿನಿಯಮದ ಮೇರೆಗೆ ಮಜೂರಿಗಳ ಕನಿಷ್ಠ ದರಗಳನ್ನು ನಿಗದಿಪಡಿಸಬೇಕೆಂದು ಅದು ಅಭಿಪ್ರಾಯಪಡುವಂಥ ಯಾವುದೇ ನಿಯೋಜನೆಗೆ ಸಂಬಂಧಿಸಿದಂತೆ ಅನುಸೂಚಿಯಲ್ಲಿನ ಯಾವುದಾದರೊಂದು ಭಾಗವನ್ನು ಸೇರಿಸಬಹುದು ಮತ್ತು ಆ ತರುವಾಯ ಅನುಸೂಚಿಯನ್ನು ರಾಜ್ಯಕ್ಕೆ ಅದು ಅನ್ವಯವಾಗಲು ತದನುಸಾರವಾಗಿ ತಿದ್ದುಪಡಿಯಾಗಿರುವುದಾಗಿ ಭಾವಿಸತಕ್ಕದ್ದು.

**28. ನಿರ್ದೇಶನಗಳನ್ನು ಕೊಡಲು ಕೇಂದ್ರ ಸರ್ಕಾರದ ಅಧಿಕಾರ.–** ಕೇಂದ್ರ ಸರ್ಕಾರವು, ರಾಜ್ಯದಲ್ಲಿ ಈ ಅಧಿನಿಯಮವನ್ನು ಕಾರ್ಯರೂಪಕ್ಕೆ ತರುವ ಬಗ್ಗೆ ರಾಜ್ಯ ಸರ್ಕಾರಕ್ಕೆ ನಿರ್ದೇಶನಗಳನ್ನು ಕೊಡಬಹುದು.

**29. ನಿಯಮಗಳನ್ನು ರಚಿಸಲು ಕೇಂದ್ರ ಸರ್ಕಾರದ ಅಧಿಕಾರ.–** ಕೇಂದ್ರ ಸರ್ಕಾರವು ಪೂರ್ವ ಪ್ರಕಟಣೆಯ ಷರತ್ತಿಗೊಳಪಟ್ಟು, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಕೇಂದ್ರ ಸಲಹಾ ಮಂಡಳಿಯ ಸದಸ್ಯರ ಪದಾವಧಿ, ವ್ಯವಹಾರವನ್ನು ನಡೆಸುವಾಗ ಅನುಸರಿಸಬೇಕಾದ ಪ್ರಕ್ರಿಯೆ, ಮತದಾನದ ವಿಧಾನ, ಸದಸ್ಯತ್ವದಲ್ಲಿ ಆಕಸ್ಮಿಕವಾಗಿ ಖಾಲಿಯಾಗುವ ಸ್ಥಾನಗಳನ್ನು ಭರ್ತಿ ಮಾಡುವ ರೀತಿ ಮತ್ತು ವ್ಯವಹಾರದ ನಿರ್ವಹಣೆಗಾಗಿನ ಅವಶ್ಯಕ ಕೋರಂ ಇವುಗಳನ್ನು ನಿಯಮಿಸುವ ನಿಯಮಗಳನ್ನು ರಚಿಸಬಹುದು.

**30. ನಿಯಮಗಳನ್ನು ರಚಿಸಲು ಸಮುಚಿತ ಸರ್ಕಾರದ ಅಧಿಕಾರ.–** (1) ಸಮುಚಿತ ಸರ್ಕಾರವು, ಪೂರ್ವ ಪ್ರಕಟಣೆಯ ಷರತ್ತಿಗೊಳಪಟ್ಟು, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ಹಿಂದೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ ಅಂಥ ನಿಯಮಗಳು,–

(ಎ) ಸಮಿತಿಗಳ, ಉಪಸಮಿತಿಗಳ ಮತ್ತು ಸಲಹಾ ಮಂಡಳಿಯ ಸದಸ್ಯರ ಪದಾವಧಿ, ವ್ಯವಹಾರವನ್ನು ನಡೆಸುವಲ್ಲಿ ಅನುಸರಿಸಬೇಕಾದ ಪ್ರಕ್ರಿಯೆ, ಮತದಾನದ ವಿಧಾನ, ಸದಸ್ಯತ್ವದಲ್ಲಿ ಆಕಸ್ಮಿಕವಾಗಿ ಖಾಲಿಯಾಗುವ ಸ್ಥಾನಗಳನ್ನು ಭರ್ತಿ ಮಾಡುವ ರೀತಿ ಮತ್ತು ಅವುಗಳ ವ್ಯವಹಾರ ನಿರ್ವಹಣೆಗಾಗಿ ಅವಶ್ಯವಾದ ಕೋರಂ ಇವುಗಳನ್ನು ನಿಯಮಿಸಬಹುದು;

(ಬಿ) ಸಮಿತಿಗಳು, ಉಪಸಮಿತಿಗಳು ಮತ್ತು ಸಲಹಾ ಮಂಡಳಿಯ ಮುಂದೆ ಸಾಕ್ಷಿದಾರರನ್ನು ಕರೆಸುವ, ವಿಚಾರಣೆಯ ವಿಷಯಕ್ಕೆ ಸುಸಂಗತವಾದ ದಸ್ತಾವೇಜುಗಳನ್ನು ಹಾಜರುಪಡಿಸುವ ವಿಧಾನವನ್ನು ನಿಯಮಿಸಬಹುದು;

(ಸಿ) ವಸ್ತುರೂಪದಲ್ಲಿ ಮಜೂರಿಯ ನಗದು ಮೌಲ್ಯವನ್ನು ಮತ್ತು ರಿಯಾಯಿತಿ ದರಗಳಲ್ಲಿ ಅತ್ಯಾವಶ್ಯಕ ವಸ್ತುಗಳ ಸರಬರಾಜಿಗೆ ಸಂಬಂಧಿಸಿದಂತೆ ರಿಯಾಯಿತಿಗಳನ್ನು ಲೆಕ್ಕಹಾಕುವ ವಿಧಾನವನ್ನು ನಿಯಮಿಸಬಹುದು;

(ಡಿ) ಮಜೂರಿಗಳ ಸಂದಾಯದ ಕಾಲ ಮತ್ತು ಷರತ್ತುಗಳು ಮತ್ತು ಅವುಗಳಿಂದ ಅನುಮತಿಸಬಹುದಾದ ಕಡಿತಗಳನ್ನು ನಿಯಮಿಸಬಹುದು;

(ಇ) ಈ ಅಧಿನಿಯಮದ ಮೇರೆಗೆ ನಿಗದಿಪಡಿಸಿದ ಮಜೂರಿಗಳ ಕನಿಷ್ಠ ದರಗಳಿಗೆ ಸಾಕಷ್ಟು ಪ್ರಚಾರವನ್ನು ಕೊಡುವುದಕ್ಕಾಗಿ ವ್ಯವಸ್ಥೆ ಮಾಡಬಹುದು;

(ಎಫ್) ಏಳು ದಿವಸಗಳ ಪ್ರತಿಯೊಂದು ಅವಧಿಯಲ್ಲಿ ವಿಶ್ರಾಂತಿ ದಿವಸಕ್ಕಾಗಿ ಮತ್ತು ಅಂಥ ದಿವಸಕ್ಕೆ ಸಂಬಂಧಿಸಿದಂತೆ ಪರಿಶ್ರಮ ಧನದ ಸಂದಾಯಕ್ಕಾಗಿ ವ್ಯವಸ್ಥೆ ಮಾಡಬಹುದು;

(ಜಿ) ಸಾಮಾನ್ಯ ಕೆಲಸದ ದಿವಸವನ್ನಾಗಿಸತಕ್ಕಂಥ ಕೆಲಸದ ಗಂಟೆಗಳ ಸಂಖ್ಯೆಯನ್ನು ನಿಯಮಿಸಬಹುದು;

(ಹೆಚ್) ಸಾಮಾನ್ಯ ಕೆಲಸದ ದಿವಸವನ್ನಾಗಿಸುವ ನಿಯಮಿತ ಗಂಟೆಗಳ ಸಂಖ್ಯೆಗಿಂತ ಕಡಿಮೆ ಅವಧಿಗಾಗಿ ನಿಯೋಜಿತನಾದ ನಿಯೋಜಿತನು ಒಂದು ಇಡೀ ಸಾಮಾನ್ಯ ದಿವಸಕ್ಕಾಗಿನ ಮಜೂರಿಗಳನ್ನು ಸ್ವೀಕರಿಸಲು ಹಕ್ಕುಳ್ಳವನಾಗದಂಥ ಪ್ರಕರಣಗಳು ಮತ್ತು ಸಂದರ್ಭಗಳನ್ನು ನಿಯಮಿಸಬಹುದು;

(ಐ) ಇಟ್ಟುಕೊಂಡು ಬರಬೇಕಾದ ರಿಜಿಸ್ಟರುಗಳು ಮತ್ತು ದಾಖಲೆಗಳ ನಮೂನೆ ಮತ್ತು ಅಂಥ ರಿಜಿಸ್ಟರುಗಳು ಮತ್ತು ದಾಖಲೆಗಳಲ್ಲಿ ನಮೂದಿಸಬೇಕಾದ ವಿವರಗಳನ್ನು ನಿಯಮಿಸಬಹುದು;

(ಜೆ) ಮಜೂರಿ ಪುಸ್ತಕಗಳು ಮತ್ತು ಮಜೂರಿ ಚೀಟಿಗಳನ್ನು ಕೊಡುವುದಕ್ಕಾಗಿ ವ್ಯವಸ್ಥೆ ಮಾಡಬಹುದು ಮತ್ತು ಮಜೂರಿ ಪುಸ್ತಕಗಳು ಮತ್ತು ಮಜೂರಿ ಚೀಟಿಗಳಲ್ಲಿ ನಮೂದನೆಗಳನ್ನು ಮಾಡುವ ಮತ್ತು ಅಧಿಪ್ರಮಾಣಿಸುವ ರೀತಿಯನ್ನು ನಿಯಮಿಸಬಹುದು;

(ಕೆ) ಈ ಅಧಿನಿಯಮದ ಉದ್ದೇಶಗಳಿಗಾಗಿ ಪರಿಶೀಲಕರ ಅಧಿಕಾರಗಳನ್ನು ನಿಯಮಿಸಬಹುದು;

(ಎಲ್) ಪ್ರಕರಣ 20ರ ಮೇರೆಗಿನ ವ್ಯವಹಾರಗಳಲ್ಲಿ ಕೊಡಬಹುದಾದಂಥ ಖರ್ಚುಗಳ ಪ್ರಮಾಣವನ್ನು ವಿನಿಯಮಿಸಬಹುದು;

(ಎಮ್) ಪ್ರಕರಣ 20ರ ಮೇರೆಗಿನ ವ್ಯವಹರಣೆಗಳಿಗೆ ಸಂಬಂಧಿಸಿದಂತೆ ಸಂದಾಯ ಮಾಡಬೇಕಾದ ನ್ಯಾಯಾಲಯ ಶುಲ್ಕಗಳ ಮೊಬಲಗನ್ನು ನಿಯಮಿಸಬಹುದು; ಮತ್ತು

(ಎನ್) ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದಂಥ ಯಾವುದೇ ಇತರ ವಿಷಯಕ್ಕಾಗಿ ಉಪಬಂಧಿಸಬಹುದು.

**30ಎ. ಕೇಂದ್ರ ಸರ್ಕಾರವು ರಚಿಸಿದ ನಿಯಮಗಳನ್ನು ಸಂಸತ್ತಿನ ಮುಂದೆ ಇಡತಕ್ಕದ್ದು.–** (1) ಕೇಂದ್ರ ಸರ್ಕಾರವು, ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನ ಅಥವಾ ಒಂದಾದ ಮೇಲೊಂದರಂತೆ ಬರುವ ಎರಡು ಅಧಿವೇಶನಗಳಲ್ಲಿ ಅಡಕವಾಗಬಹುದಾದಂಥ ಒಟ್ಟು ಮೂವತ್ತು ದಿವಸಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಅದನ್ನು ಹಾಗೆ ಇಡಲಾದ ಅಧಿವೇಶನ ಅಥವಾ ಅದಕ್ಕೆ ನಿಕಟೋತ್ತರದ ಅಧಿವೇಶನದ ಮುಕ್ತಾಯಕ್ಕೆ ಮುಂಚೆ ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ ಆ ತರುವಾಯ ಆ ನಿಯಮವು ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗಿರತಕ್ಕದ್ದಲ್ಲ; ಆದಾಗ್ಯೂ ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

(2) ರಾಜ್ಯ ಸರ್ಕಾರವು, ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಸಾಧ್ಯವಾದಷ್ಟು ಬೇಗನೇ ರಾಜ್ಯ ವಿಧಾನಮಂಡಲದ ಮುಂದೆ ಮಂಡಿಸತಕ್ಕದ್ದು.

**31. ಕೆಲವು ಮಜೂರಿಗಳು ಕನಿಷ್ಠ ದರಗಳನ್ನು ನಿಗದಿಪಡಿಸುವಿಕೆಯ ಸಿಂಧುಗೊಳಿಸುವಿಕೆ.–** (ಎ) 1952ರ ಏಪ್ರಿಲ್ 1ನೇ ದಿವಸದಂದು ಪ್ರಾರಂಭವಾಗಿ, ಕನಿಷ್ಠ ಮಜೂರಿ (ತಿದ್ದುಪಡಿ) ಅಧಿನಿಯಮ, 1954 (1954ರ 26) ಇದರ ಪ್ರಾರಂಭದ ದಿನಾಂಕದಂದು ಕೊನೆಗೊಳ್ಳುವ; ಅಥವಾ

(ಬಿ) 1954 ಡಿಸೆಂಬರ್ 31ನೇ ದಿವಸದಂದು ಪ್ರಾರಂಭವಾಗಿ, ಕನಿಷ್ಠ ಮಜೂರಿ (ತಿದ್ದುಪಡಿ) ಅಧಿನಿಯಮ, 1957 (1957ರ 30) ಇದರ ಪ್ರಾರಂಭದ ದಿನಾಂಕದಂದು ಕೊನೆಗೊಳ್ಳುವ; ಅಥವಾ

(ಸಿ) 1959ರ ಡಿಸೆಂಬರ್ 31ನೇ ದಿವಸದಂದು ಪ್ರಾರಂಭವಾಗಿ, ಕನಿಷ್ಠ ಮಜೂರಿ (ತಿದ್ದುಪಡಿ) ಅಧಿನಿಯಮ, 1961 (1961ರ 31)ರ ಪ್ರಾರಂಭದ ದಿನಾಂಕದಂದು ಕೊನೆಗೊಳ್ಳುವ

– ಅವಧಿಯಲ್ಲಿ ಸಂದರ್ಭಾನುಸಾರ ಕನಿಷ್ಠ ಮಜೂರಿ (ತಿದ್ದುಪಡಿ) ಅಧಿನಿಯಮ, 1954 (1954ರ 26) ಅಥವಾ ಕನಿಷ್ಠ ಮಜೂರಿ (ತಿದ್ದುಪಡಿ) ಅಧಿನಿಯಮ, 1957 (1957ರ 30), ಕನಿಷ್ಠ ಮಜೂರಿ (ತಿದ್ದುಪಡಿ) ಅಧಿನಿಯಮ, 1961 (1961ರ 31)–ಇವುಗಳ ಪ್ರಾರಂಭಕ್ಕೆ ನಿಕಟಪೂರ್ವದಲ್ಲಿ ಜಾರಿಯಲ್ಲಿದ್ದಂತೆ ಪ್ರಕರಣ 3ರ ಉಪಪ್ರಕರಣ (1)ರ ಖಂಡ (ಎ)ಯ ಮೇರೆಗೆ ಅಂಥ ದರಗಳನ್ನು ನಿಗದಿಪಡಿಸಲಾಗುತ್ತಿದ್ದವೆಂಬ ನಂಬಿಕೆಯಲ್ಲಿ ಅಥವಾ ನಂಬಬಹುದೆಂದು ತಾತ್ಪರ್ಯವಾಗುವಂತೆ, ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ನಿಯೋಜನೆಯಲ್ಲಿ, ನಿಯೋಜಿತರಾದ ನಿಯೋಜಿತರಿಗೆ ಸಂದಾಯವಾಗಬೇಕಾಗಿರುವಂತೆ ಸಮುಚಿತ ಸರ್ಕಾರವು ಮಜೂರಿಗಳ ಕನಿಷ್ಠ ದರಗಳನ್ನು ನಿಗದಿಪಡಿಸಿರುವಲ್ಲಿ ಅಂಥ ದರಗಳನ್ನು ಕಾನೂನಿಗನುಸಾರವಾಗಿ ನಿಗದಿಪಡಿಸಲಾಗಿದೆಯೆಂದು ಭಾವಿಸತಕ್ಕದ್ದು ಮತ್ತು ದರಗಳನ್ನು ನಿಗದಿಪಡಿಸಿದ ಕಾಲಗಳಲ್ಲಿ ಆ ಖಂಡದಲ್ಲಿನ ಉದ್ದೇಶಕ್ಕಾಗಿ ನಿರ್ದಿಷ್ಟಪಡಿಸಿದ ಸಂಬಂಧಪಟ್ಟ ದಿನಾಂಕವು ಮುಕ್ತಾಯಗೊಂಡಿತ್ತು ಎಂಬ ಕಾರಣ ಮಾತ್ರದಿಂದಲೇ ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸತಕ್ಕದ್ದಲ್ಲ:

ಪರಂತು, ಈ ಪ್ರಕರಣದಲ್ಲಿರುವುದು ಯಾವುದೂ, ಈ ಪ್ರಕರಣದಲ್ಲಿ ಉಲ್ಲೇಖಿಸಿದ ಮಜೂರಿಗಳ ಕನಿಷ್ಠ ದರಗಳಿಗಿಂತ ಕಡಿಮೆಯಾದಂಥ ಮೊಬಲಗನ್ನು ಈ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಅವಧಿಯಲ್ಲಿ ಅವನ ನಿಯೋಜಿತರಲ್ಲಿ ಯಾರಿಗೇ ಆಗಲಿ ಮಜೂರಿಗಳ ರೂಪದಲ್ಲಿ ಅವನು ಮಾಡಿದ ಸಂದಾಯದ ಕಾರಣದಿಂದ ಅಥವಾ ಪ್ರಕರಣ 13ರ ಮೇರೆಗೆ ಹೊರಡಿಸಿದ ಯಾವುದೇ ಆದೇಶ ಅಥವಾ ನಿಯಮವನ್ನು ಹಿಂದೆ ಹೇಳಿದ ಅವಧಿಯಲ್ಲಿ ಪಾಲಿಸದೇ ಇರುವ ಕಾರಣದಿಂದ ಎಂಥದೇ ಶಿಕ್ಷೆ ಅಥವಾ ದಂಡನೆಗೆ ಗುರಿಯಾಗುವಂತೆ ಯಾರೇ ವ್ಯಕ್ತಿಗೆ ಬಾಧಕವನ್ನುಂಟುಮಾಡುವ ಹಾಗೆ ವ್ಯಾಪ್ತವಾಗತಕ್ಕದ್ದಲ್ಲ ಅಥವಾ ವ್ಯಾಪ್ತವಾಗುತ್ತದೆ ಎಂದು ಅರ್ಥೈಸತಕ್ಕದ್ದಲ್ಲ.

**ಅನುಸೂಚಿ**

**2(ಜಿ) ಮತ್ತು 27ನೇ ಪ್ರಕರಣಗಳನ್ನು ನೋಡಿ**

**ಭಾಗ 1**

1. ಯಾವುದೇ ಉಣ್ಣೆ ಜಮಾಖಾನೆ ತಯಾರಿಕೆ ಅಥವಾ ಶಾಲು ನೇಯ್ಯುವ ಸ್ಥಾಪನೆಯಲ್ಲಿನ ನಿಯೋಜನೆ.

2. ಯಾವುದೇ ಅಕ್ಕಿ ಗಿರಣಿ, ಹಿಟ್ಟಿನ ಗಿರಣಿ ಅಥವಾ ಬೇಳೆ ಗಿರಣಿಯಲ್ಲಿನ ನಿಯೋಜನೆ.

3. ಯಾವುದೇ ಹೊಗೆಸೊಪ್ಪು (ಬೀಡಿ ಕಟ್ಟುವುದನ್ನು ಒಳಗೊಂಡು) ಕಾರ್ಖಾನೆಯಲ್ಲಿನ ನಿಯೋಜನೆ.

4. ಯಾವುದೇ ನೆಡುತೋಪಿನಲ್ಲಿ ಎಂದರೆ ಸಿಂಕೋನ, ರಬ್ಬರು, ಟೀ ಅಥವಾ ಕಾಫಿಯನ್ನು ಬೆಳೆಯುವ ಯಾವುದೇ ಉದ್ದೇಶಕ್ಕಾಗಿ ನಿರ್ವಹಿಸುತ್ತಿರುವಂಥ ಯಾವುದೇ ಎಸ್ಟೇಟಿನಲ್ಲಿನ ನಿಯೋಜನೆ.

5. ಯಾವುದೇ ಎಣ್ಣೆ ಗಿರಣಿಯಲ್ಲಿನ ನಿಯೋಜನೆ.

6. ಯಾವುದೇ ಸ್ಥಳೀಯ ಪ್ರಾಧಿಕಾರದ ಅಧೀನದಲ್ಲಿನ ನಿಯೋಜನೆ.

7. ರಸ್ತೆಗಳ ನಿರ್ಮಾಣ ಅಥವಾ ಅವುಗಳ ನಿರ್ವಹಣೆಯ ಅಥವಾ ಕಟ್ಟಡ ಕಾರ್ಯಗಳಲ್ಲಿನ ನಿಯೋಜನೆ.

8. ಕಲ್ಲು ಒಡೆಯುವ ಅಥವಾ ಕಲ್ಲು ಜಜ್ಜುವುದರಲ್ಲಿನ ನಿಯೋಜನೆ.

9. ಯಾವುದೇ ಅರಗು ಕಾರ್ಖಾನೆಯಲ್ಲಿನ ನಿಯೋಜನೆ.

10. ಯಾವುದೇ ಅರ್ಭಕ ಕೆಲಸಗಳಲ್ಲಿನ ನಿಯೋಜನೆ.

11. ಸಾರ್ವಜನಿಕ ಮೋಟಾರು ಸಾರಿಗೆಯಲ್ಲಿನ ನಿಯೋಜನೆ.

12. ಚರ್ಮ ಹದ ಮಾಡುವ ಸ್ಥಳಗಳ ಮತ್ತು ತೊಗಲಿನ ಕಾರ್ಖಾನೆಯಲ್ಲಿನ ನಿಯೋಜನೆ.

ಜಿಪ್ಸಮ್ ಗಣಿಗಳಲ್ಲಿನ ನಿಯೋಜನೆ.

ಬರೈಟೀಸ್ ಗಣಿಗಳಲ್ಲಿನ ನಿಯೋಜನೆ.

ಬಾಕ್ಸೈಟ್ ಗಣಿಗಳಲ್ಲಿನ ನಿಯೋಜನೆ.

ಮ್ಯಾಂಗನೀಸ್ ಗಣಿಗಳಲ್ಲಿನ ನಿಯೋಜನೆ.

ಕಟ್ಟಡಗಳ ನಿರ್ವಹಣೆಯಲ್ಲಿನ ನಿಯೋಜನೆ ಮತ್ತು ರನ್ ವೇಗಳ ನಿರ್ಮಾಣ ಮತ್ತು ನಿರ್ವಹಣೆಯಲ್ಲಿನ ನಿಯೋಜನೆ.

ಪಿಂಗಾಣಿ ಜೇಡಿ ಮಣ್ಣಿನ ಗಣಿಗಳಲ್ಲಿನ ನಿಯೋಜನೆ.

ಕಯನೈಟ್ ಗಣಿಗಳಲ್ಲಿನ ನಿಯೋಜನೆ.

ತಾಮ್ರದ ಗಣಿಗಳಲ್ಲಿ ನಿಯೋಜನೆ.

ಗಣಿಗಳ ಅಧಿನಿಯಮ, 1952 (1952ರ 35)ರ ಮೇರೆಗೆ ಒಳಗೊಂಡ ಜೇಡಿಮಣ್ಣಿನ ಗಣಿಗಳಲ್ಲಿನ ನಿಯೋಜನೆ.

ಗಣಿಗಳ ಅಧಿನಿಯಮ, 1952 (1952ರ 35)ರ ಮೇರೆಗೆ ಒಳಗೊಂಡ ಮ್ಯಾಗ್ನಸೈಟ್ ಗಣಿಗಳಲ್ಲಿನ ನಿಯೋಜನೆ.

ಬಿಳಿ ಜೇಡಿಮಣ್ಣಿನ ನಿಯೋಜನೆ.

ಕಲ್ಲು ಗಣಿಗಳಲ್ಲಿನ ನಿಯೋಜನೆ.

ಬಳಪದ ಕಲ್ಲಿನಲ್ಲಿನ (ಸಾಬೂನು ಕಲ್ಲು ಮತ್ತು ಟಾಲ್ಕನ್ನು ಉತ್ಪಾದಿಸುವ ಗಣಿಗಳನ್ನು ಒಳಗೊಂಡು) ನಿಯೋಜನೆ.

ಕಾವಿಮಣ್ಣಿನ ಗಣಿಗಳಲ್ಲಿನ ನಿಯೋಜನೆ.

ಕಲ್ನಾರಿನ ಗಣಿಗಳಲ್ಲಿನ ನಿಯೋಜನೆ.

ಕಾವು–ಜೇಡಿ ಮಣ್ಣಿನ ಗಣಿಗಲ್ಲಿನ ನಿಯೋಜನೆ.

ಕ್ರೊಮೈಟ್ ಗಣಿಗಳಲ್ಲಿನ ನಿಯೋಜನೆ.

ಬೆಣಚು ಕಲ್ಲಿನ ಗಣಿಗಳಲ್ಲಿನ ನಿಯೋಜನೆ.

ಬೆಣಚು ಗಣಿಗಳಲ್ಲಿನ ನಿಯೋಜನೆ.

ಸಿಲಿಕಾ ಗಣಿಗಳಲ್ಲಿನ ನಿಯೋಜನೆ.

ಗ್ರಾಫಿಕ್ ಗಣಿಗಳಲ್ಲಿನ ನಿಯೋಜನೆ.

ಫೆಲ್ಸ್ ಪಾರ್ ಗಣಿಗಳಲ್ಲಿನ ನಿಯೋಜನೆ.

ಜಂಬಿಟ್ಟಿಗೆ ಗಣಿಗಳಲ್ಲಿನ ನಿಯೋಜನೆ.

ಡೊಲೊಮೈಟ್ ಗಣಿಗಳಲ್ಲಿನ ನಿಯೋಜನೆ.

ರೆಡ್‌ಆಕ್ಸೈಡ್ ಗಣಿಗಳಲ್ಲಿನ ನಿಯೋಜನೆ.

ವುಲ್ ಫಾರ್ಮ್ ಗಣಿಗಳಲ್ಲಿನ ನಿಯೋಜನೆ.

ಕಬ್ಬಿಣದ ಅದಿರುಗಣಿಗಳಲ್ಲಿನ ನಿಯೋಜನೆ.

ಗ್ರಾನೈಟ್ ಗಣಿಗಳಲ್ಲಿನ ನಿಯೋಜನೆ.

## ಭಾಗ II

1. ಕೃಷಿಯಲ್ಲಿನ ನಿಯೋಜನೆ ಎಂದರೆ, ಭೂಮಿಯ ಸಾಗುವಳಿ ಮತ್ತು ಉಳುಮೆಯನ್ನು ಒಳಗೊಂಡು ಯಾವುದೇ ರೂಪದ ವ್ಯವಸಾಯದಲ್ಲಿ, ಹಾಲು ಉತ್ಪಾದನಾ ವ್ಯವಸಾಯ, ಯಾವುದೇ ಕೃಷಿಕ ಅಥವಾ ತೋಟಗಾರಿಕೆಯ ವಸ್ತುಗಳ ಉತ್ಪಾದನೆ, ಸಾಗುವಳಿ, ಬೆಳೆಯುವುದು ಮತ್ತು ಕೊಯ್ಲು ಮಾಡುವುದು, ಜಾನುವಾರು, ಜೇನು ಅಥವಾ ಕೋಳಿ ಸಾಕಣೆ ಮತ್ತು ರೈತನು ನೆರವೇರಿಸಿದ ಯಾವುದೇ ಆಚರಣೆ ಅಥವಾ ಕೃಷಿ ಕ್ಷೇತ್ರದ ಕಾರ್ಯಾಚರಣೆಗಳಿಗೆ (ಯಾವುದೇ ಅರಣ್ಯ ಅಥವಾ ಮರಮುಟ್ಟಿನ ಕಾರ್ಯಾಚರಣೆಗಳು ಮತ್ತು ಕೃಷಿ ಉತ್ಪನ್ನವನ್ನು ಮಾರುಕಟ್ಟೆಯಾಗಿ ಸಿದ್ಧಪಡಿಸುವುದು ಮತ್ತು ದಾಸ್ತಾನಿಗೆ ಅಥವಾ ಮಾರುಕಟ್ಟೆಗೆ ಅಥವಾ ಮಾರುಕಟ್ಟೆಗೆ ಸಾಗಿಸುವುದಕ್ಕಾಗಿ, ವಾಹನಕ್ಕೆ ವಶಾವಣೆ ಮಾಡುವುದನ್ನು ಒಳಗೊಂಡು) ಪ್ರಾಸಂಗಿಕವಾದ ಅಥವಾ ಅದರೊಡನೆ ಕೃಷಿ ಕ್ಷೇತ್ರದಲ್ಲಿ ನೆರವೇರಿಸಿದ ಯಾವುದೇ ಆಚರಣೆಯಲ್ಲಿನ ನಿಯೋಜನೆ.